ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೨೧


# ವಾರ್ಷಿಕ ವರದಿ

೧೯೯೧-೯೨ ಮತ್ತು ೧೯೯೨-೯೩

ಸಹಾಯಕ ನಿರ್ದೇಶಕರು
ಮಾಹಿತಿ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583 276

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

# ವಾರ್ಷಿಕ ವರದಿ

೧೯೯೧-೯೨ ಮತ್ತು ೧೯೯೨-೯೩

# ಪರಿವಿಡಿ


| | |
|---|---|
| ವಿಶ್ವವಿದ್ಯಾಲಯದ ವರಿಷ್ಠರು. | ೦೧ |
| ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸದಸ್ಯರು. | ೦೧ |
| ಆಡಳಿತ ಮಂಡಳಿ ಸದಸ್ಯರು. | ೦೨ |
| ಕನ್ನಡ ವಿಶ್ವವಿದ್ಯಾಲಯದ ಲಾಂಛನ. | ೦೩ |
| ಸ್ಥಾಪನೆಯ ಹಿನ್ನೆಲೆ. | ೦೪ |
| ಉದ್ದೇಶ – ಸ್ವರೂಪ. | ೦೫ |
| ಅಭಿವೃದ್ಧಿ ಚಟುವಟಿಕೆಗಳು. | ೦೬ |
| ಅರಣ್ಯ ಅಭಿವೃದ್ಧಿ. | ೦೭ |
| ವಿಶ್ವವಿದ್ಯಾಲಯದ ಅಧ್ಯಯನಾಂಗಗಳ ಪ್ರಾಧ್ಯಾಪಕರು ಮತ್ತು ಬೋಧಕ ಸಿಬ್ಬಂದಿ | ೦೭ |
| ಶೈಕ್ಷಣಿಕ ಕಾರ್ಯಕ್ರಮಗಳ ಆರಂಭ | ೦೯ |
| ವಿಶ್ವವಿದ್ಯಾಲಯದಲ್ಲಿ ನೆರೆಹಾವಳಿ | ೧೦ |
| ಹೊಸ ಆವರಣದಲ್ಲಿ ಕಟ್ಟಡದ ಶಿಲಾನ್ಯಾಸ | ೧೦ |
| ಅಧ್ಯಯನಾಂಗ | ೧೧ |
| ಭಾಷಾ ನಿಕಾಯ | ೧೧ |
| ಭಾಷಾಂತರ ವಿಭಾಗ | ೧೬ |
| ಭಾಷಾವಿಜ್ಞಾನ ವಿಭಾಗ | ೧೯ |
| ಸಮಾಜವಿಜ್ಞಾನ ನಿಕಾಯ | ೨೧ |
| ಇತಿಹಾಸ ವಿಭಾಗ | ೨೬ |
| ಸಭೆಗಳು, ಸಮಾರಂಭಗಳು | ೨೩ |
| ಗಣ್ಯರ ಭೇಟಿ | ೨೯ |
| ನುಡಿಹಬ್ಬ, ಕೆಲವು ಮುಖ್ಯ ಕಾರ್ಯಕ್ರಮಗಳು | ೩೩ |
| ನೀನಾಸಂ, ನಾಟಕ ಪ್ರಯೋಗ | ೩೩ |
| ಸಂಶೋಧನಾ ಕಮ್ಮಟಗಳು ಮತ್ತು ವಿಚಾರ ಸಂಕಿರಣಗಳು | ೩೫ |
| ಕರ್ನಾಟಕದ ಕಲೆ, ಪರಂಪರೆ ಮತ್ತು ಆಧುನಿಕತೆ | ೩೮ |
| ೧೯೯೨–೯೩ನೇ ಸಾಲಿನ ಪ್ರಕಟಣೆಗಳು | ೩೯ |
| ಗ್ರಂಥಾಲಯ | ೪೧ |
| ಚಿತ್ತರ | ೪೨ |

ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ

ವಾರ್ಷಿಕ ವರದಿ : ೧೯೯೧-೯೨ ಮತ್ತು ೧೯೯೨-೯೩

## ವಿಶ್ವವಿದ್ಯಾಲಯದ ವರಿಷ್ಠರು

ಕುಲಾಧಿಪತಿ :ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳಾದ

ಶ್ರೀ ಎಸ್. ಬಂಗಾರಪ್ಪ ಅವರು

ಸಹಕುಲಾಧಿಪತಿ :ಕರ್ನಾಟಕ ಸರಕಾರದ ಮಾನ್ಯ ಉನ್ನತ ವಿದ್ಯಾಮಂತ್ರಿಗಳಾದ

ಶ್ರೀ ಎಂ.ವೀರಪ್ಪ ಮೊಯಿಲಿ ಅವರು

ಕುಲಪತಿ : ಡಾ.ಚಂದ್ರಶೇಖರ ಕಂಬಾರ(೦೮.೦೧.೯೨ರಿಂದ)

ಕುಲಸಚಿವ : ಶ್ರೀ ಜನಾರ್ದನ ರಾವ್

ಶ್ರೀ ಎನ್.ಬಿ.ಚಂದ್ರಮೋಹನ್

ಶ್ರೀ ಕೆ.ವಿ.ನಾರಾಯಣ

ಶ್ರೀ ಪುರುಷೋತ್ತಮ ಬಿಳಿಮಲೆ

ಹಣಕಾಸು ಅಧಿಕಾರಿ : ಶ್ರೀ ಆರ್.ಕೆ.ಪ್ರಸಾದ್

## ನಿಕಾಯಗಳ ಡೀನರು

ಭಾಷಾ ನಿಕಾಯ : ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ

ಅಧ್ಯಯನಾಂಗದ ನಿರ್ದೇಶಕರು : ಡಾ.ಪುರುಷೋತ್ತಮ ಬಿಳಿಮಲೆ

ಡಾ.ಕೆ.ವಿ.ನಾರಾಯಣ

ಪ್ರಸಾರಾಂಗದ ನಿರ್ದೇಶಕರು : ಶ್ರೀ.ಟಿ.ಶ್ರೀನಿವಾಸರಾಜು


## ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸದಸ್ಯರು

ಮಾನ್ಯ ಕುಲಾಧಿಪತಿಗಳು(ಕರ್ನಾಟಕ ಸರಕಾರದ ಮುಖ್ಯಮಂತ್ರಿಗಳು)

೦೧. ಡಾ.ಚಂದ್ರಶೇಖರ ಕಂಬಾರ : ಅಧ್ಯಕ್ಷರು
೦೨. ಡಾ.ಸಿದ್ಧಲಿಂಗಯ್ಯ
೦೩. ಶ್ರೀ ಬರಗೂರು ರಾಮಚಂದ್ರಪ್ಪ
೦೪. ಶ್ರೀಮತಿ ಸಾರಾ ಅಬೂಬಕರ್
೦೫. ಶ್ರೀ ನಾ.ಡಿ`ಸೋಜ
೦೬. ಶ್ರೀ ಚೆನ್ನವೀರ ಕಣವಿ
೦೭. ಪ್ರೊ.ಎಂ.ಎಚ್.ಕೃಷ್ಣಯ್ಯ
೦೮. ಶ್ರೀ ಕೆ.ಅಣ್ಣಾಜಿ
೦೯. ಶಿಕ್ಷಣ ಇಲಾಖೆಯ ಪ್ರಭಾರದಲ್ಲಿರುವ ಸರಕಾರದ ಕಾರ್ಯದರ್ಶಿ
೧೦. ಹಣಕಾಸು ಇಲಾಖೆಯ ಪ್ರಭಾರದಲ್ಲಿರುವ ಸರಕಾರದ'ಕಾರ್ಯದರ್ಶಿ
೧೧. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರಕಾರದ ಕಾರ್ಯದರ್ಶಿ
೧೨. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರಕಾರದ ಕಾರ್ಯದರ್ಶಿ
೧೩. ಪುರಾತತ್ವ ಇಲಾಖೆಯ ನಿರ್ದೇಶಕರು

## ಆಡಳಿತ ಮಂಡಳಿ ಸದಸ್ಯರು

೦೧. ಡಾ.ಎಚ್.ಗಿರಿಜಮ್ಮ
೦೨. ಪ್ರೊ.ಟಿ.ಡಿ.ಕಟ್ಟೀಮನಿ
೦೩. ಶ್ರೀಮತಿ ಗಂಗೂಬಾಯಿ ಹಾನಗಲ್
೦೪. ಶ್ರೀ ಬೊಳುವಾರು ಮಹಮ್ಮದ್ ಕುಂಞ
೦೫. ಶ್ರೀ ಆರ್.ಎಂ.ಹಡಪದ್
೦೬. ಶ್ರೀ ಮುದೇನೂರು ಸಂಗಣ್ಣ
೦೭. ಡಾ.ಬೆಸಗರಹಳ್ಳಿ ರಾಮಣ್ಣ
೦೮. ಶ್ರೀ ಎಲ್.ಎಸ್.ಶೇಷಗಿರಿರಾವ್
೦೯. ಶ್ರೀ ಎನ್.ತಿಪ್ಪಣ್ಣ (ವಿಧಾನ ಪರಿಷತ್ತಿನ ಪ್ರತಿನಿಧಿ)
೧೦. ಬಿ.ಎಂ.ಇದಿನಬ್ಬ (ವಿಧಾನ ಸಭೆಯ ಪ್ರತಿನಿಧಿ)
೧೧. ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೨. ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
೧೩. ಅಧ್ಯಕ್ಷರು, ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು
೧೪. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬೆಂಗಳೂರು
೧೫. ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು
೧೬. ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
೧೭. ಅಧ್ಯಕ್ಷರು, ವಿಶ್ವವಿದ್ಯಾಲಯ ಧನಸಹಾಯ ಆಯೋಗ, ನವದೆಹಲಿ-೧
೧೮. ಅಧ್ಯಕ್ಷರು, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ
೧೯. ಅಧ್ಯಕ್ಷರು, ಕೇಂದ್ರ ಸಂಗೀತ ನಾಟಕ ಅಕಾಡೆಮಿ, ನವದೆಹಲಿ
೨೦. ಮಹಾನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ, ನವದೆಹಲಿ



## ಕನ್ನಡ ವಿಶ್ವವಿದ್ಯಾಲಯದ ಲಾಂಛನ

ಕನ್ನಡದ ಖ್ಯಾತ ಕಲಾವಿದರಾದ ಶ್ರೀ.ಸಿ.ಚಂದ್ರಶೇಖರ್ ಅವರು ಹಲ್ಮಿಡಿ ಶಾಸನದ ಮೇಲ್ಭಾಗದಲ್ಲಿರುವ ಕೆತ್ತನೆಯನ್ನು ಬಳಸಿ ರಚಿಸಿದ ವಿಶ್ವವಿದ್ಯಾಲಯದ ಲಾಂಛನವನ್ನು ಅಂಗೀಕರಿಸಲಾಗಿದೆ.

ಶಾಸನದ ಸುದರ್ಶನ ಚಕ್ರ ಹಾಗೂ ಶೀರ್ಷ ಭಾಗವನ್ನು ಶೈಲೀಕೃತಗೊಳಿಸಿ ಕೆಳಗೆ ಪೀಠರೂಪಿಯಾದ ಓಲೆಗ್ರಂಥವನ್ನು ಸೇರಿಸಿ ಸಂಯೋಜಿತ ವಿನ್ಯಾಸವನ್ನು ರೂಪಿಸಿದೆ. ಇಲ್ಲಿ ಬಂದಿರುವ ಚಕ್ರದ ಅರೆಗಳ ವಿಶಿಷ್ಟ ವಿನ್ಯಾಸವುಪುಷ್ಪದ ದಳವಿನ್ಯಾಸವನ್ನು ಸೂಚಿಸುತ್ತದೆ. ಅದು ಹೃತ್ಕಮಲವೂ ಆಗಬಹುದು. ಕಲಾವಿದನ ರಚನಾ ವಿನ್ಯಾಸದಲ್ಲಿಅದು ಸೂರ್ಯನ ಸಂಕೇತವೂ ಹೌದು. ಅಗ್ನಿಯ, ಶಕ್ತಿಯ ಬೆಳಕಿನ ಮೂಲ. ಅರಿವಿನ ಬೆಳಕಿನ ಪ್ರಸರಣ. ಜ್ಞಾನಜ್ಯೋತಿಯ ಬಿಂಬ. ಆಧುನಿಕರಿಗೆ ಚಕ್ರದ ಆವಿಷ್ಕಾರ ನಾಗರಿಕತೆಯ ಉಗಮದ ಸಂಕೇತ. ವಿಜ್ಞಾನ–ತಂತ್ರಜ್ಞಾನದಸಂಕೇತವೂ ಆಗಬಹುದು. ಒಟ್ಟಿನಲ್ಲಿ ಮಾನವನ ಚೈತನ್ಯಶೀಲ ವ್ಯಕ್ತಿತ್ವದ ಸಂಕೇತ ಈ ಲಾಂಛನ.

ಸುದರ್ಶನ ಚಕ್ರವನ್ನು ಕಮಾನು ವಿನ್ಯಾಸ ಶೀರ್ಷವಾಗಿ ಆವರಿಸಿದೆ. ವಿಜಯನಗರದ ದ್ವಾರಗಳ ಬಹುಪಾಲುಶೀರ್ಷಭಾಗದ ವಿನ್ಯಾಸ ಈ ಬಗೆಯದು. ಇದು ಪರಂಪರೆಯ ಸೂಚಕ. ಇದು ತಲೆಯಭಾಗವನ್ನು ಹೋಲುತ್ತದೆ. ಅದು ಜ್ಞಾನಪೀಠದ ಶೀರ್ಷದಂತೆ. ಅದು ಕರ್ನಾಟಕದ ಹೆಮ್ಮೆಯ ಕಲೆ ಯಕ್ಷಗಾನದ ಶೀರ್ಷಾಲಂಕಾರವನ್ನು ನೆನಪಿಸುತ್ತದೆ. ಈ ವಿನ್ಯಾಸ ಅಗಲವಾದ ದೀಪದ ಕುಡಿಯೂ ಆಗಬಹುದು. ಅದು ಜ್ಞಾನಜ್ಯೋತಿಯ ಸೂಚಕವೂ ಆಗಬಹುದು. ಈಟಿ ಅಥವಾ ಭಲ್ಲೆಯ ಅಲಗು ಸಹ ಆಗಿ ಕ್ಷಾತ್ರ ತೇಜಸ್ಸಿನ ಸಂಕೇತವಾಗಬಹುದು.

ಸುದರ್ಶನಚಕ್ರ ಹಾಗೂ ಶೀರ್ಷ ವಿನ್ಯಾಸಕ್ಕೆ ಓಲೆಗ್ರಂಥ ಪೀಠವಾಗಿ ರೂಪಿತವಾಗಿದೆ. ಎರಡು ಅಂಚಿನ ಗ್ರಂಥಗಳ 'ಗುರುತು ಪಟ್ಟಿಗಳು ಓಲೆಗರಿಯ ಗ್ರಂಥಗಳಲ್ಲವಾದರೂ ಕಲಾತ್ಮಕ ದೃಷ್ಟಿಯ ವಿನ್ಯಾಸಕ್ಕೆ ಸಾರೂಪಕ್ಕೆ ಆಗತ್ಯ ಭೂರ್ಜಪತ್ರ, ಗ್ರಂಥರೂಪವನ್ನು ಸೂಚಿಸುತ್ತವೆ. ಇದರಿಂದ ಪ್ರಾಚೀನ ಜ್ಞಾನ ಪರಂಪರೆಯ ಸಂಶೋಧನೆಗೆ ಆಹ್ವಾನವೀಯುವ ಹಸ್ತಪ್ರತಿಗಳು ಆಧಾರ ಲಾಂಛನಕ್ಕೆ ಒದಗಿದೆ.

ಓಲೆಗ್ರಂಥದ ಮೇಲೆ `ಮಾತೆಂಬುದು ಜ್ಯೋತಿರ್ಲಿಂಗ' ಎಂಬ ಧ್ಯೇಯಸೂಕ್ತಿ ಉದ್ಧೃತವಾಗಿದೆ. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಲಿಂಗದ ಪರಿಕಲ್ಪನೆ ಅದ್ಭುತವಾದದ್ದು. ಹರಪ್ಪಾ ಸಂಸ್ಕೃತಿಯಲ್ಲೇ ಕಾಣಬರುವ ಪ್ರತಿಮಾಕಲ್ಪನೆ ಅದು. ಜ್ಯೋತಿರ್ಲಿಂಗ ಆಧ್ಯಾತ್ಮಿಕ ಸಂಕೇತವಾಗಿರುವಂತೆ ಜ್ಞಾನದ, ಪ್ರಜ್ಞೆಯ ಸೃಜನಶೀಲ ಪ್ರತಿಭೆಯ ಸಂಕೇತವೂ ಆಗಬಹುದು. ಮಾತು ಅದರ ವ್ಯಕ್ತರೂಪ. ಮನುಷ್ಯನನ್ನು ವಿಶಿಷ್ಟವಾಗಿಸುವುದು ಮಾತು. ಅದು ಅರಿವಿನ ವ್ಯಕ್ತರೂಪ. ಈ ಧ್ಯೇಯಸೂಕ್ತಿ ಸಂಶೋಧನೆಯನ್ನೆ, ಜ್ಞಾನಾನ್ವೇಷಣೆಯನ್ನೆ ಉದ್ದೇಶವಾಗುಳ್ಳ ಕನ್ನಡ ವಿಶ್ವವಿದ್ಯಾಲಯಕ್ಕೆ ಔಚಿತ್ಯಪೂರ್ಣವಾಗಿ ಅನ್ವಯಿಸುತ್ತದೆ. ಸುದರ್ಶನ ಚಕ್ರದ ಮೇಲಿನ ಅರ್ಧಭಾಗದಲ್ಲಿ ಲಾಳಾಕಾರದಲ್ಲಿ `ಕನ್ನಡ ವಿಶ್ವವಿದ್ಯಾಲಯ' ಬರಹವಿದೆ.

(ಅರ್ಥ ವಿವರಣೆ: ಪ್ರೊ.ಎಂ.ಎಚ್ .ಕೃಷ್ಣಯ್ಯ)

## ಸ್ಥಾಪನೆಯ ಹಿನ್ನೆಲೆ

೧೯೮೫ರಲ್ಲಿ ಮೈಸೂರಿನಲ್ಲಿ ಜರುಗಿದ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಆಲೋಚನೆ ಅಂಕುರಿಸಿತು. ಕನ್ನಡಿಗರ ಈ ಒತ್ತಾಸೆಯ ಸಾಧ್ಯತೆಯನ್ನು ಪರಿಶೀಲಿಸಲು ಹಾಗೂ ಆ ಕುರಿತು ಸೂಚನೆಗಳನ್ನು ನೀಡಲು ಡಿಸೆಂಬರ್ ೩೧,೧೯೮೫ ರಂದು ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ.ಎಸ್.ಎಸ್.ಒಡೆಯರ್ ಅವರನ್ನು ಕೇಳಿಕೊಂಡಿತು. ಶ್ರೀ ಒಡೆಯರ್ ಅವರು ರಾಜ್ಯದ ಒಳಗೆ ಹಾಗೂ ಹೊರಗೆ ಅನೇಕ ಶೈಕ್ಷಣಿಕ – ಸಾಂಸ್ಕೃತಿಕ ಧೀಮಂತರನ್ನು ಭೇಟಿ ಮಾಡಿ ವರದಿಯನ್ನು ಸಿದ್ಧಪಡಿಸಿ ಸರಕಾರಕ್ಕೆ ಒಪ್ಪಿಸಿದರು. ಅಂದಿನ ಆಡಳಿತ ಸರಕಾರ ಈ ವರದಿಯನ್ನು ಸಮಗ್ರಗೊಳಿಸಿ ಕನ್ನಡ–ಭಾಷೆ–ಸಂಸ್ಕೃತಿ–ಕಲೆ–ಮಾನವಿಕ–ವಿಜ್ಞಾನಕಲೆಗಳ ಶೋಧನೆ ಹಾಗೂ ಸಂಗೋಪನಕ್ಕಾಗಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯು ಅಗತ್ಯವೆಂದು ಮನಗಂಡಿತು. ಅಂದಿನ ಮುಖ್ಯಮಂತ್ರಿ ಶ್ರೀ ಎಸ್ .ಬಂಗಾರಪ್ಪನವರು ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯನ್ನು ಪ್ರಕಟಿಸಿದಾಗ ಕರ್ನಾಟಕ ಜನಕೋಟಿ ಅದನ್ನು ಸ್ವಾಗತಿಸಿತು. ಇಂತಹ ಮಹತ್ವಾಕಾಂಕ್ಷೆಯ ವಿಶ್ವವಿದ್ಯಾಲಯದ ರಚನೆಯನ್ನು ರೂಪಿಸಲು ಕರ್ನಾಟಕದ ಹಿರಿಯ ಸಂವೇದನಶೀಲ ವಿದ್ವಾಂಸ, ರಂಗಭೂಮಿ, ಸಾಹಿತ್ಯ, ಕಲೆ. ಸಿನೆಮಾ ಮುಂತಾದ ಸೃಜನಶೀಲ ಮಾಧ್ಯಮಗಳ ಪರಿಣತ ಡಾ.ಚಂದ್ರಶೇಖರ ಕಂಬಾರ ಅವರನ್ನು ಸರಕಾರ ಗುರುತಿಸಿತು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ–ಸಾಹಿತ್ಯಿಕ ಸಂಘಟನೆಗಳನ್ನು ಕಟ್ಟಿ ಬೆಳೆಸಿದ, ಸೇವೆಸಲ್ಲಿಸಿದ ಅನುಭವವುಳ್ಳ ಅವರನ್ನು ಕರ್ನಾಟಕ ಸರಕಾರ ೨೩.೧೦.೧೯೯೧ರಂದು ವಿಶೇಷ ಆಡಳಿತ ಅಧಿಕಾರಿಯನ್ನಾಗಿ ನೇಮಿಸುವ ಮೂಲಕ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ವಿಧ್ಯುಕ್ತವಾಗಿ ಆರಂಭವಾಯಿತು.

ಡಾ.ಚಂದ್ರಶೇಖರ ಕಂಬಾರರು ವಿಶೇಷ ಆಡಳಿತ ಅಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದೊಡನೆ ರಾಜ್ಯದ ಹೊರಗೆ ಹಾಗೂ ಒಳಗೆ ವ್ಯಾಪಕ ಪ್ರವಾಸ ನಡೆಸಿ ನಾಡುನುಡಿಗೆ ಸೇವೆ ಸಲ್ಲಿಸಿದ–ಸಲ್ಲಿಸುತ್ತಿರುವ ವಿವಿಧ ಸಂಘಸಂಸ್ಥೆಗಳನ್ನು, ವ್ಯಕ್ತಿಗಳನ್ನು ಭೇಟಿ ಮಾಡಿದರು. ಅದರ ಫಲಿತವಾಗಿ ಭವಿಷ್ಯದ ಕನ್ನಡ ವಿಶ್ವವಿದ್ಯಾಲಯದ ರೂಪು–ರೇಖೆಗಳ ಒಂದು ವಿನ್ಯಾಸವನ್ನು ರೂಪಿಸಿ ಸರಕಾರಕ್ಕೆ ಸಲ್ಲಿಸಿದರು. ಅನಂತರ ಕರ್ನಾಟಕ ಸರಕಾರ ಡಾ.ಕಂಬಾರರ ಪ್ರತಿಭೆ–ಕ್ರಿಯಾಶಕ್ತಿಯನ್ನು ಮನಗಂಡು ಅವರನ್ನು ೦೮.೦೧.೧೯೯೨ರಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ನೇಮಕ ಮಾಡಿದಾಗ ಕನ್ನಡದ ಜನಕೋಟಿ ಅದಕ್ಕೆ ಅಪಾರ ಸಂತೋಷವನ್ನು ವ್ಯಕ್ತಪಡಿಸಿತು.

## ಉದ್ದೇಶ - ಸ್ವರೂಪ

ಇತಿಹಾಸದಲ್ಲಿ ಇಡೀ ದಕ್ಷಿಣ ಭಾರತವನ್ನು ಪ್ರತಿನಿಧಿಸುವ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದಾಗಿದ್ದ ಹಂಪಿಯ ಪರಿಸರದಲ್ಲಿ ಕನ್ನಡ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದೆ. ಕನ್ನಡ ನಾಡುನುಡಿ ಸಂಸ್ಕೃತಿಗಳ ಅಧ್ಯಯನ-ಶೋಧನೆ ನಡೆಸುವುದು ಕನ್ನಡ ವಿಶ್ವವಿದ್ಯಾಲಯದ ಮೂಲ ಉದ್ದೇಶ. ಆ ಮೂಲಕ ನಮ್ಮ ಪರಂಪರೆಯ ಬಗ್ಗೆ ಹೊಸಚಿತ್ರವನ್ನು ಕಟ್ಟಿಕೊಡುವುದು ಈ ವಿಶ್ವವಿದ್ಯಾಲಯದ ಉದ್ದೇಶ.

ಮಾನ್ಯ ಕುಲಪತಿ ಡಾ.ಚಂದ್ರಶೇಖರ ಕಂಬಾರರು ಈ ವಿಶ್ವವಿದ್ಯಾಲಯದ ಆಶಯವನ್ನು ಹೀಗೆ ವಿವರಿಸಿದ್ದಾರೆ. ``ಹಂಪಿಯ ವಿಶ್ವವಿದ್ಯಾಲಯ ಒಂದು ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸಲು ಮಾತ್ರ ಜನ್ಮ ತಳೆದಿದೆ. ಅದಕ್ಕೂ ರಾಜ್ಯದ ಉಳಿದ ವಿಶ್ವವಿದ್ಯಾಲಯಗಳಿಗೂ ಯಾವುದೇ ಬಗೆಯ ಸ್ಪರ್ಧಾತ್ಮಕ ಸಂಬಂಧವಿಲ್ಲ. ಉಳಿದ ವಿಶ್ವವಿದ್ಯಾಲಯಗಳಲ್ಲಿ ನಡೆದಿರುವ ಸಂಶೋಧನ ಕಾರ್ಯ ಇಲ್ಲಿ ಪುನರುಕ್ತವಾಗುವುದಿಲ್ಲ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಂಶೋಧನೆಯ ಧ್ಯೇಯ ಸಂಪೂರ್ಣ ತಿಳುವಳಿಕೆಯ ಕಡೆಗೆ ಇರುತ್ತದೆ. ತಿಳುವಳಿಕೆಯ ದಿಗಂತವನ್ನು ವಿಸ್ತರಿಸುವ ಕಡೆಗಿರುತ್ತದೆ. ಇಲ್ಲಿ ನಡೆಯುವ ಸಂಶೋಧನೆ ಉನ್ನತ ಮಟ್ಟದ್ದಾಗಿರಬೇಕಲ್ಲದೆ ಉತ್ಕೃಷ್ಟವೂ ಆಗಿರಬೇಕೆಂಬ ಕಳಕಳಿ ಈ ವಿಶ್ವವಿದ್ಯಾಲಯಕ್ಕಿದೆ.

ಹಂಪಿಯ ವಿಶ್ವವಿದ್ಯಾಲಯದ ಮುಂದಿರುವ ಮುಖ್ಯ ಧ್ಯೇಯ ಕನ್ನಡವನ್ನು ಬಲಗೊಳಿಸುವುದು. ಹನ್ನೆರಡನೆಯ ಶತಮಾನದ ವಚನಕಾರರು ತಮ್ಮ ಆಧ್ಯಾತ್ಮಿಕ ಅಭಿವ್ಯಕ್ತಿಗಾಗಿ ಕನ್ನಡವನ್ನು ಬಳಸಿಕೊಂಡು ಅದಕ್ಕೊಂದು ಅಪೂರ್ವವಾದ ಸಾಮರ್ಥ್ಯವನ್ನು ತಂದುಕೊಟ್ಟರು. ಅದರ ಫಲವಾಗಿ ಸಂಸ್ಕೃತದ ಹಂಗಿಲ್ಲದೆ ಕನ್ನಡ ಆಧ್ಯಾತ್ಮಿಕ ಅನುಭವವನ್ನು ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯವನ್ನು ಪಡೆಯಿತು.

ಇಂದು ಮತ್ತೆ ಕನ್ನಡಕ್ಕೆ ವಿಷಮಕಾಲ. ವಿಜ್ಞಾನ, ಎಂಜಿನಿಯರಿಂಗ್, ಆಧುನಿಕ ತಂತ್ರಜ್ಞಾನ ಇವನ್ನೆಲ್ಲ ಇಂಗ್ಲಿಷ್ ಭಾಷೆಯ ಮೂಲಕ ಕಲಿಯುತ್ತಿದ್ದೇವೆ. ಸಾಹಿತ್ಯ, ಕಲೆ, ತತ್ವಜ್ಞಾನ, ರಾಜಕೀಯ, ಸಮಾಜಶಾಸ್ತ್ರಗಳಿಗೆ ಇಂಗ್ಲಿಷ್‌ನ ಜೊತೆಗೆ ಕನ್ನಡವನ್ನು ಉಪಯೋಗಿಸಲು ಕಲಿಯುತ್ತಿದ್ದೇವೆ. ಆದರೆ ಬೇರೆ ಭಾಷೆಯ ಮಾಧ್ಯಮದಿಂದ ಕೇವಲ ತಿಳುವಳಿಕೆಯಷ್ಟೇ ದೊರೆಯುವುದಿಲ್ಲ. ತಿಳುವಳಿಕೆಯ ವಿಧಾನಗಳೂ ಬಂದು ಬಿಡುತ್ತವೆ. ಕನ್ನಡ ತನ್ನ ಶಾಸ್ತ್ರ ವಿಧಾನಗಳನ್ನು ರೂಪಿಸಲು ಕಲಿಯಬೇಕಾಗಿದೆ. ಆಗಲೇ ತಿಳುವಳಿಕೆ ನಮ್ಮದಾಗುವುದು. ಅದ್ಭುತ ದೇವಾಲಯಗಳನ್ನು ನಿರ್ಮಿಸಿದ್ದ ನಮ್ಮ ಪೂರ್ವಜರ ತಂತ್ರಜ್ಞಾನ ಯಾವುದಿತ್ತು ಎಂದು ಯೋಚಿಸಲು ಕೂಡ ನಾವು ಪ್ರಯತ್ನ ಮಾಡಿಲ್ಲ. ಅಂದರೆ ನಮ್ಮ ಪಾರಂಪರಿಕ ತಿಳುವಳಿಕೆಯ ಸಮಂಜಸತೆಯನ್ನು ನಮ್ಮ ಬದುಕಿಗೆ ಅಳವಡಿಸುವ ಪ್ರಯತ್ನದಲ್ಲಿ ಕನ್ನಡ ವಿಶ್ವವಿದ್ಯಾಲಯ ಮುಂದಾಗುತ್ತದೆ''.

## ಅಭಿವೃದ್ಧಿ ಚಟುವಟಿಕೆಗಳು

### ಭೂಸ್ವಾಧೀನ :

ಡಾ.ಚಂದ್ರಶೇಖರ ಕಂಬಾರರು ಕನ್ನಡ ವಿಶ್ವವಿದ್ಯಾಲಯದ ವಿಶೇಷ ಅಧಿಕಾರಿಯಾಗಿ ನೇಮಕಗೊಂಡ ಕೂಡಲೇ ವಿಶ್ವವಿದ್ಯಾಲಯ ಸ್ಥಾಪನೆಗೆ ಅಗತ್ಯವಾದ ಭೂಮಿಯನ್ನು ವಶಪಡಿಸಿಕೊಳ್ಳಲು ಕಾರ್ಯಪ್ರವೃತ್ತರಾದರು. ಹೊಸಪೇಟೆ ತಾಲೂಕಿನ ಕಮಲಾಪುರ ಗ್ರಾಮಕ್ಕೆ ಸೇರಿದ ೫೬೦.೩೭ ಎಕರೆ ಸರಕಾರಿ ಭೂಮಿಯನ್ನು ವಿಶ್ವವಿದ್ಯಾಲಯದ ವಶಕ್ಕೆ ತೆಗೆದುಕೊಳ್ಳುವ ಸಲುವಾಗಿ ಬಳ್ಳಾರಿ ಜಿಲ್ಲಾಧಿಕಾರಿ ಹಾಗೂ ಸರಕಾರದ ಕಂದಾಯ ಇಲಾಖೆಯ ಅಧಿಕಾರಿಗಳ ಜತೆ ಪತ್ರವ್ಯವಹಾರ ನಡೆಸಲಾಯಿತು. ಸರಕಾರ ನಮ್ಮ ಕೋರಿಕೆಯನ್ನು ಮನ್ನಿಸಿ ಪ್ರತಿ ಎಕರೆಗೆ ಒಂದು ರೂಪಾಯಿನಂತೆ ಮಾರುಕಟ್ಟೆ ಬೆಲೆಯನ್ನು ಸರಕಾರಕ್ಕೆ ಸಂದಾಯ ಮಾಡಿ ವಶಕ್ಕೆ ತೆಗೆದುಕೊಳ್ಳುವಂತೆ ಆದೇಶ ನೀಡಿತು. ಅಂತೆಯೇ ಸರಕಾರಕ್ಕೆ ಹಣವನ್ನು ಪಾವತಿ ಮಾಡಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಆ ಜಮೀನನ್ನು ಮೋಜಣಿದಾರರಿಂದ ಅಳತೆಮಾಡಿಸಿ ಹದ್ದುಬಸ್ತು ಗುರುತಿಸಿ ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸಿಕೊಳ್ಳಲು ನಿರ್ಧರಿಸಿತು.

### ಕಲ್ಲು ಮಂಟಪಗಳಲ್ಲಿ ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ತನ್ನದೇ ಆದ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ನೆಲೆವೂರುವ ಮುನ್ನ ಹಂಪಿಯ ಎದುರುಬಸವನ ಮಂಟಪದ ಬಲಭಾಗಕ್ಕೆ ಇರುವ ವಿಸ್ತಾರವಾದ ಮೂರು ಕಲ್ಲು ಮಂಟಪಗಳನ್ನು ವಿಶ್ವವಿದ್ಯಾಲಯಕ್ಕಾಗಿ ಬಳಸಿಕೊಂಡಿತು. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ದೇವರಾಜ ಮತ್ತು ಕುಲಪತಿಗಳು ಮಾನ್ಯ ಶಿಕ್ಷಣ ಸಚಿವರ ಸಮ್ಮುಖದಲ್ಲಿ ಚರ್ಚಿಸಿ ಸೂಕ್ತ ಆದೇಶದ ಮೇರೆಗೆ ೨೦.೦೨.೧೯೯೨ರಂದು ಈ ಮೂರು ಮಂಟಪಗಳನ್ನು ವಿಶ್ವವಿದ್ಯಾಲಯವು ತನ್ನ ಶೈಕ್ಷಣಿಕ ಕಾರ್ಯಗಳಿಗೆ ತಾತ್ಕಾಲಿಕವಾಗಿ ಪಡೆದುಕೊಂಡಿತು. ಒಂದು ಮಂಟಪದಲ್ಲಿ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು,ಇನ್ನೊಂದು ಮಂಟಪದಲ್ಲಿ ಯೋಜನಾ ಕಾರ್ಯಾಲಯವನ್ನು ಮತ್ತೊಂದರಲ್ಲಿ ಆಡಳಿತ ಕಚೇರಿಯನ್ನು ಪ್ರಾರಂಭಿಸಿತು.

### ರಸ್ತೆ ನಿರ್ಮಾಣ

ಕನ್ನಡ ವಿಶ್ವವಿದ್ಯಾಲಯದ ಆವರಣವಾಗಿ ಕರ್ನಾಟಕ ಸರಕಾರ ನೀಡಿರುವ ನಿವೇಶನವನ್ನು ಕಮಲಾಪುರದಿಂದ 'ಜೋಡಿಸುವ ರಸ್ತೆ ಮತ್ತು ಆವರಣದೊಳಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣಕ್ಕೆ ಹೈದರಾಬಾದ್ ಅಭಿವೃದ್ಧಿ ಮಂಡಳಿಯ ನೆರವನ್ನು ಕೋರಲಾಯಿತು.

## ಅರಣ್ಯ ಅಭಿವೃದ್ಧಿ

ಫಲಪುಷ್ಪ ಹಾಗೂ ನೆರಳಿನ ಗಿಡಮರಗಳನ್ನು ನೆಟ್ಟು ಬೆಳಸಬೇಕಾದ ದೊಡ್ಡ ಸವಾಲನ್ನು ಕನ್ನಡ ವಿಶ್ವವಿದ್ಯಾಲಯ ಮೊದಲಿಗೆ ಎದುರಿಸಿತು. ಕುರುಚಲು ಮುಳ್ಳುತಂತಿ ಹಾಗೂ ಬಂಡೆಗಳಿಂದ ಆವೃತವಾಗಿದ್ದ ಆವರಣವನ್ನು ಹಸುರುಗೊಳಿಸುವ ಮಹತ್ವದ ಯೋಜನೆಯನ್ನು ವಿಶ್ವವಿದ್ಯಾಲಯ ಹಾಕಿಕೊಂಡಿತು. ಈ ಸಂಬಂಧವಾಗಿ ಅಂದಿನ ಅರಣ್ಯ ಸಚಿವ ಶ್ರೀ ಈ.ಟಿ.ಶಂಭುನಾಥರು ವಿಶೇಷವಾಗಿ ಸಹಕರಿಸಿದರು. ಬಳ್ಳಾರಿ ಜಿಲ್ಲೆಯ ಅರಣ್ಯ ಸಂರಕ್ಷಣಾಧಿಕಾರಿಗಳು ವಿಶೇಷ ನೆರವಿಗೆ ಬಂದರು.

ಕನ್ನಡ ವಿಶ್ವವಿದ್ಯಾಲಯದ ಅರಣ್ಯೀಕರಣ ಯೋಜನೆಯ ಉದ್ಘಾಟನೆಯು ೨೭ . ೦೬ . ೧೯೯೨ರಂದು ಜರುಗಿತು ಮಾನ್ಯ ಅರಣ್ಯ ಸಚಿವ ಶ್ರೀ.ಈ.ಟಿ.ಶಂಭುನಾಥರು ಉದ್ಘಾಟನಾ ಭಾಷಣ ಮಾಡುತ್ತಾ "ಇದು ಬಿತ್ತನೆಯ ಕಾಲ. ಈ ಕಾಲಕ್ಕೆ ಸರಿಯಾಗಿ ನಾವು ಅರಣ್ಯೀಕರಣ ಕಾರ್ಯಕ್ರಮವನ್ನು ಇರಿಸಿಕೊಂಡಿದ್ದೇವೆ. ರವೀಂದ್ರನಾಥ ಠಾಗೂರರ 'ಶಾಂತಿನಿಕೇತನ' ದ ಮಾದರಿಯ ವಿಶ್ವವಿದ್ಯಾಲಯ ಇಲ್ಲಿ ರೂಪುಗೊಳ್ಳಬೇಕು" ಎಂದರು.

ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗಗಳ ಪ್ರಾಧ್ಯಾಪಕರು ಮತ್ತು ಇತರೆ ಬೋಧಕ ಸಿಬ್ಬಂದಿ ೧೯೯೨-೯೩

೦೧. ಡಾ.ಕೆ.ವಿ.ನಾರಾಯಣ, ಪ್ರಾಧ್ಯಾಪಕರು ಭಾಷೆ ಮತ್ತು ಸಾಹಿತ್ಯ ವಿಭಾಗ
೦೨. ಡಾ.ಪುರುಷೋತ್ತಮ ಬಿಳಿಮಲೆ – '' – ಜಾನಪದ ವಿಭಾಗ
೦೩. ಪ್ರೊ.ಓ.ಎಲ್ .ನಾಗಭೂಷಣ ಸ್ವಾಮಿ – '' – ಭಾಷಾಂತರ ವಿಭಾಗ
೦೪. ಪ್ರೊ.ಎಚ್ .ಎಸ್ .ರಾಘವೇಂದ್ರರಾವ್ – '' – ಭಾಷೆ ಮತ್ತು ಸಾಹಿತ್ಯ ವಿಭಾಗ
೦೫. ಡಾ.ಕರೀಗೌಡ ಬೀಚನಹಳ್ಳಿ, ರೀಡರ್, ಭಾಷೆ ಮತ್ತು ಸಾಹಿತ್ಯ ವಿಭಾಗ
೦೬. ಪ್ರೊ.ಹಿ.ಚಿ.ಬೋರಲಿಂಗಯ್ಯ – '' – ಜಾನಪದ ವಿಭಾಗ
೦೭. ಡಾ.ರಹಮತ್ ತರೀಕೆರೆ – '' – ಭಾಷೆ ಮತ್ತು ಸಾಹಿತ್ಯ ವಿಭಾಗ
೦೮. ಶ್ರೀ ಮಲ್ಲೇಪುರಂ ಜಿ.ವೆಂಕಟೇಶ್ – '' – ----'' -----------
೦೯. ಶ್ರೀ ಲಕ್ಷ್ಮಣ್ ತೆಲಗಾವಿ – '' – ಇತಿಹಾಸ ವಿಭಾಗ
೧೦. ಶ್ರೀ ಜಯಕುಮಾರ್, ಅಧ್ಯಾಪಕ ದೃಶ್ಯಕಲಾ ವಿಭಾಗ
೧೧. ಶ್ರೀ ಸುಬ್ಬಣ್ಣ ರೈ, ಸಂಶೋಧನಾ ಸಹಾಯಕ
೧೨. ಶ್ರೀ ಮೋಹನ್ ಕುಂಟಾರ್ ---- '' ------
೧೩. ಶ್ರೀ ಮಂಜುನಾಥ ಬೇವಿನಕಟ್ಟಿ ----- '' -----
೧೪. ಶ್ರೀ ಎಫ್ .ಟಿ.ಹಳ್ಳಿಕೇರಿ ----- '' -----
೧೫. ಶ್ರೀ ಸಿ.ಮಹದೇವ ----- '' -----
೧೬. ಶ್ರೀ ಚೆಲುವರಾಜು ----- '' -----
೧೭. ಶ್ರೀ ಅಶೋಕ್ ಕುಮಾರ ರಂಜೇರೆ ----- '' -----

೧೮. ಶ್ರೀ ಸುಬ್ಬಾನಮೂರ್ತಿ ------ '' ------
೧೯. ಶ್ರೀ ಬಾಪುಗೌಡ ------ '' ----
೨೦. ಶ್ರೀ ಪಾಂಡುರಂಗ ಬಾಬು ------ '' ------
೨೧. ಶ್ರೀ ವಿಠಲ್ ರಾವ್ ಗಾಯಕ್ವಾಡ್ -------''------
೨೨. ಶ್ರೀಮತಿ ಲಕ್ಷ್ಮಿದೇವಿ ಎಲ್ ------ '' ------
೨೩. ಶ್ರೀ ವೆಂಕಟೇಶ ಇಂದ್ವಾಡಿ ------ '' ------
೨೪. ಶ್ರೀ ಲಿಂಗರಾಜು ------- '' ------
೨೫. ಶ್ರೀ ಶಿವಾನಂದ ವಿರಕ್ತಮಠ ------- '' -------
೨೬. ಶ್ರೀಮತಿ ರೇಣು ಆರ್ --------- ''------

ಸಂದರ್ಶಕ ಪ್ರಾಧ್ಯಾಪಕರು

೦೧. ಶ್ರೀ ಟಿ.ಪಿ.ಅಶೋಕ
೦೨. ಶ್ರೀ.ಕಿ.ರಂ.ನಾಗರಾಜ

ಬೋಧಕೇತರ ಸಿಬ್ಬಂದಿ

೦೧. ಶ್ರೀ ಜೆ.ಆರ್.ರಾಮಮೂರ್ತಿ, ಮುಖ್ಯಗ್ರಂಥಪಾಲಕರು
೦೨. ಶ್ರೀ ಟಿ.ಶ್ರೀನಿವಾಸರಾಜು, ನಿರ್ದೇಶಕರು, ಪ್ರಸಾರಾಂಗ
೦೩. ಶ್ರೀಮತಿ ನಾಗವೇಣಿ ಎಚ್, ತಾಂತ್ರಿಕ ಸಹಾಯಕಿ, ಗ್ರಂಥಾಲಯ
೦೪. ಶ್ರೀ.ಜೆ.ಎಸ್.ನಂಜಯ್ಯನವರ್, ಕಿರಿಯ ಅಭಿಯಂತರು, ಅಭಿವೃದ್ಧಿ ವಿಭಾಗ
೦೫. ಶ್ರೀ ಸುಹಾಸ್ ಎಸ್, ಗ್ರಂಥಾಲಯ ಸಹಾಯಕ
೦೬. ಶ್ರೀ ಲಕ್ಷ್ಮಣ ಮಹಾಮುನಿ, ಬೆರಳಚ್ಚುಗಾರರು
೦೭. ಶ್ರೀಮತಿ ಪಾರ್ವತಮ್ಮ ಕೆ.ಎಂ. -------'' -----
೦೮. ಶ್ರೀಮತಿ ಗೀತಾ ಆರ್ ------ '' -------
೦೯. ಶ್ರೀ ಸೋಮಣ್ಣ ಸೂಡಿ -------'' -----
೧೦. ಶ್ರೀ ಮಹೇಶ್ ಉಣಕಲ್, ಕಿರಿಯ ಸಹಾಯಕ
೧೧. ಶ್ರೀಮತಿ ಅನಿತಾ ಬೊಥೆಲ್ಲೊ, ಹಂಗಾಮಿ
೧೨. ಶ್ರೀಮತಿ ಡಿ.ಪ್ರಭಾ, ಹಂಗಾಮಿ
೧೩. ಶ್ರೀ ಎಂ.ಎಂ.ಶಿವಪ್ರಕಾಶ್, ಹಂಗಾಮಿ ಕಿರಿಯ ಸಹಾಯಕ
೧೪. ಶ್ರೀ ಸಿ.ಜಿ.ಪಾಟೀಲ್, ಅಧೀಕ್ಷಕರು (ಪ್ರತಿನಿಯೋಜನೆ)
೧೫. ಶ್ರೀ ಆರ್ .ತುಕಾರಾಂ, ಅಧೀಕ್ಷಕರು ( ----''--)
೧೬. ಶ್ರೀ ಎಚ್.ಟಿ.ಹಜಾರೆ, ಪ್ರಥಮ ದರ್ಜೆ ಭೂಮಾಪಕರು (ಪ್ರತಿನಿಯೋಜನೆ)

೧೭. ಶ್ರೀ ಜೆ.ರವೀಂದ್ರ, ಪ್ರಥಮ ದರ್ಜೆ ಗುಮಾಸ್ತ (ಪ್ರತಿನಿಯೋಜನೆ)

೧೮. ಶ್ರೀ ರಿಯಾಜ್ ಗಡ್ಡದವರ್, ಕಿರಿಯ ಸಹಾಯಕ (ಪ್ರತಿನಿಯೋಜನೆ)

೧೯. ಶ್ರೀ ಎ.ನಾಗಪ್ಪ, ಕಿರಿಯ ಸಹಾಯಕ (ಪ್ರತಿನಿಯೋಜನೆ)

೨೦. ಶ್ರೀ ವೈ.ಪ್ರಕಾಶ್, ಬೆರಳಚ್ಚುಗಾರರು (ಪ್ರತಿನಿಯೋಜನೆ)

೨೧. ಶ್ರೀ ಅನಂತರಾಜು, ಪ್ರಥಮ ದರ್ಜೆ ಗುಮಾಸ್ತ (ಪ್ರತಿನಿಯೋಜನೆ)

## ಶೈಕ್ಷಣಿಕ ಕಾರ್ಯಕ್ರಮಗಳ ಆರಂಭ

ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳ ಉದ್ಘಾಟನೆಯು ದಿನಾಂಕ: ೨೭.೦೬.೧೯೯೨ ರಂದು ವಿಶ್ವವಿದ್ಯಾಲಯದ ಸಹಕುಲಾಧಿಪತಿ ಶಿಕ್ಷಣ ಸಚಿವ ಎಂ.ವೀರಪ್ಪ ಮೊಯಿಲಿಯವರಿಂದ ಜರುಗಿತು. ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ ``ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯನ್ನು ನಾವಿಂದು ಅನುಸರಿಸುತ್ತಾ ಬರುತ್ತಿದ್ದು ನಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿದ್ದೇವೆ. ನಮ್ಮ ಪ್ರಾಚೀನ ಶಿಕ್ಷಣ ಪದ್ಧತಿಯ ಗುಣಾತ್ಮಕ ಅಂಶಗಳನ್ನು ಇಂದಿನ ಶಿಕ್ಷಣ ವ್ಯವಸ್ಥೆಯೊಂದಿಗೆ ಕಸಿ ಮಾಡಿದಲ್ಲಿ ಅದ್ಭುತ ಫಲಿತಾಂಶ ದೊರೆವ ಸಾಧ್ಯತೆ ಇದೆ. ಈ ದಿಸೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಯೋಗ ನಡೆಸಲಿ''. ನಮ್ಮ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಬೋಧನೆಗೇ ಹೆಚ್ಚಿನ ಒತ್ತು ಕಾಣಿಸುತ್ತಿದೆ. ಅಲ್ಲಿ ಸಂಶೋಧನೆಗೆ ಎರಡನೇ ಸ್ಥಾನ. ಸಂಶೋಧನೆಗಾಗಿಯೇ ಇರುವ ರಾಜ್ಯ ಪುರಾತತ್ವ ಇಲಾಖೆ, ರಾಜ್ಯ ಶಾಸನಶಾಸ್ತ್ರ ಇಲಾಖೆ, ಮತ್ತು ಪ್ರಾಚ್ಯ ಹಸ್ತಪ್ರತಿ ಇಲಾಖೆಗಳು ತಮ್ಮ ಕಾರ್ಯಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡು ಅನ್ಯಜ್ಞಾನ ಶಿಸ್ತುಗಳಿಂದ ದೊರೆಯುವ ಪ್ರಯೋಜನಗಳಿಂದ ವಂಚಿತವಾಗಿವೆ. ಈ ಉದ್ದೇಶದಿಂದ ಬೋಧನೆ–ಪರೀಕ್ಷೆಗಳಿಂದ ಮುಕ್ತವಾದ ಅಂತರ್ ಶಿಸ್ತೀಯ ಅಧ್ಯಯನ–ಸಂಶೋಧನೆಗಳಿಗೆ ಒತ್ತು ನೀಡುವ ಸಲುವಾಗಿಯೇ ಈ ಹಂಪಿ ಕನ್ನಡ ವಿಶ್ವವಿದ್ಯಾಲಯ ರೂಪುಗೊಂಡಿದೆ. ಹಂಪಿಯ ವಿಶ್ವವಿದ್ಯಾಲಯದ ಗುರಿ ಬರಿಯ ಪ್ರಾಚೀನ ಸಂಸ್ಕೃತಿಯ ಶೋಧವಷ್ಟೇ ಅಲ್ಲ. ನಮ್ಮ ವರ್ತಮಾನದ ನಿರ್ಮಾಣವೂ ಹೌದು. ಆ ಕೆಲಸ ಇಲ್ಲಿ ನಡೆಯಬೇಕು. ನಮ್ಮ ಸಂಸ್ಕೃತಿಯ ರೂಪಣೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಪರಿಶಿಷ್ಟರ ಬದುಕಿನ ಮೇಲೆ ಬೆಳಕು ಚೆಲ್ಲುವ ಉಪಸಂಸ್ಕೃತಿಯ ಅಧ್ಯಯನ ಇಲ್ಲಿ ಸಾಗಬೇಕು. ನಮ್ಮ ನಾಡಿನ ಬುಡಕಟ್ಟುಗಳನ್ನು ನಾಡಿನ ಮುಖ್ಯಧಾರೆಯೊಂದಿಗೆ ಸೇರಿಸುವ, ಅವರ ಕುಲಕೌಶಲದ ಲಾಭವನ್ನು ಸಮಾಜ ಪಡೆಯುವ ಕೆಲಸವನ್ನು ನಾವು ರೂಪಿಸಬೇಕಾಗಿದೆ. ಸಂಸ್ಕೃತಿಯ ಶೋಧದಲ್ಲಿ ಸಾಹಿತ್ಯ ಹಾಗೂ ಸಾಹಿತ್ಯೇತರ ಆಕರಗಳನ್ನು ಸಮಗ್ರವಾಗಿ ಬಳಸಿಕೊಳ್ಳಬೇಕು. ಶಿಲ್ಪಶಾಸ್ತ್ರ, ವೈದ್ಯಶಾಸ್ತ್ರ, ಗಣಿತಶಾಸ್ತ್ರ, ಪಾಕಶಾಸ್ತ್ರಗಳಂತಹ ಪಾರಂಪರಿಕ ಜ್ಞಾನಶಾಖೆಗಳ ಲಾಭವನ್ನು ವರ್ತಮಾನದ ಬದುಕಿಗೆ ತಲುಪಿಸುವ ಕೆಲಸ ಈ ವಿಶ್ವವಿದ್ಯಾಲಯದಲ್ಲಿ ನಡೆಯಬೇಕು. ಅರಮನೆ, ಗುರುಮನೆಗಳಲ್ಲಿ ಬಿದ್ದಿರುವ ಅಮೂಲ್ಯ ಹಸ್ತಪ್ರತಿಗಳ ಶೋಧ ನಡೆಯಬೇಕು. ಕರ್ನಾಟಕದ ಒಂದೊಂದು ಗ್ರಾಮಕ್ಕೂ ಒಂದು ಇತಿಹಾಸವಿದೆ. ಅವುಗಳನ್ನು ಪುನಾರಚಿಸಿ ಸಂಗ್ರಹಿಸಿ ಸಂಪುಟಗಳಲ್ಲಿ ರೂಪಿಸಬೇಕಾಗಿದೆ. ಆಗ ಕರ್ನಾಟಕವೇ ನಮ್ಮ ಕಣ್ಣಮುಂದೆ ಬರುತ್ತದೆ. ಇತಿಹಾಸದ ಕಳೆದುಹೋದ ಕೊಂಡಿಗಳು ತಾವಾಗಿಯೇ ಸಿಕ್ಕಿ ಕನ್ನಡ ವಿಶ್ವವಿದ್ಯಾಲಯದ ಕನಸು ನನಸಾಗುತ್ತದೆ. ಈಗ ನಾವು ಬರೆಯುತ್ತಿರುವ ಇತಿಹಾಸದ ದೃಷ್ಟಿಕೋನವೇ ಬದಲಾಗಬೇಕು. ಆರ್ಯ ಸಂಸ್ಕೃತಿ ನೀಡಿದ ದೃಷ್ಟಿಕೋನದಿಂದ ವಸಾಹತು ಸಂಸ್ಕೃತಿ ಬೀರಿದ ಒತ್ತಡದ ಹಿನ್ನೆಲೆಯಲ್ಲಿ ನಮ್ಮ ಇತಿಹಾಸ ರಚನೆಗೊಳ್ಳುತ್ತಿದೆ. ಈ ಯಜಮಾನ ದೃಷ್ಟಿಕೋನದ ಇತಿಹಾಸ ರಚನೆಯ ಬದಲು ಜನಪದ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಮ್ಮ ಇತಿಹಾಸ ರಚನೆಗೊಳ್ಳಬೇಕಾಗಿದೆ'' ಎಂದರು.

## ವಿಶ್ವವಿದ್ಯಾಲಯದಲ್ಲಿ ನೆರೆಹಾವಳಿ

ನವೆಂಬರ್ ೧೮,೧೯೯೨ರಂದು ಹಂಪೆಯಲ್ಲಿ ಸುರಿದ ವಿಪರೀತ ಮಳೆಯಿಂದಾಗಿ ವಿಶ್ವವಿದ್ಯಾಲಯದ ಆವರಣವು ನೀರಿನಿಂದ ಆವೃತವಾಯಿತು. ಗ್ರಂಥಾಲಯದ ನೂರಾರು ಪುಸ್ತಕಗಳು, ದಾಖಲೆಗಳು ತೊಯ್ದುವು. ವಿಶ್ವವಿದ್ಯಾಲಯದ ಸಿಬ್ಬಂದಿವರ್ಗ ಯುದ್ಧೋಪಾದಿಯಲ್ಲಿ ಶ್ರಮವಹಿಸಿ ಆಗಬಹುದಾಗಿದ್ದ ದೊಡ್ಡ ಅಪಾಯವನ್ನು ತಪ್ಪಿಸಿದರು. ಮಾನ್ಯ ಕುಲಪತಿಯವರ ಮಾತಿನಲ್ಲಿ ಹೇಳುವುದಾದರೆ ``. . . . . . . . . . .ವಿರೂಪಾಕ್ಷಸ್ವಾಮಿ ಈಗಷ್ಟೆ ಚಿಗುರುತ್ತಿದ್ದ ನಮ್ಮ ಕನಸುಗಳ ಚಂಡಿ ಚಿವುಟಿ ಬಿಟ್ಟಿದ್ದ. ಹಾಗಂಥ ಕತ್ತು ಚೆಲ್ಲ ಬಾರದಲ್ಲ. ಮುಳುಗಿದ್ದು ಕಲ್ಲುಮಂಟಪ, ವಿಶ್ವವಿದ್ಯಾಲಯವಲ್ಲ...... '' . ಉಂಟಾಗಿರುವ ನಷ್ಟ ಭಾರೀ ಪ್ರಮಾಣದ್ದು ಆಗಿದ್ದರೂ ವಿಶ್ವವಿದ್ಯಾಲಯವನ್ನು ಪೂರ್ಣವಾಗಿ ಪುನರ್ ವ್ಯವಸ್ಥೆಗೊಳಿಸಿ ಅಭಿವೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುವ ಛಲವನ್ನು ಸಿಬ್ಬಂದಿವರ್ಗದವರು ತೋರಿದರು.

## ಹೊಸ ಆವರಣದಲ್ಲಿ ಕಟ್ಟಡದ ಶಿಲಾನ್ಯಾಸ

ಕನ್ನಡ ವಿಶ್ವವಿದ್ಯಾಲಯದ ಹೊಸ ಆವರಣದಲ್ಲಿ ದಿನಾಂಕ ೨೯.೦೯.೧೯೯೨ರಂದು ಕರ್ನಾಟಕ ಮುಖ್ಯಮಂತ್ರಿಗಳೂ, ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಶ್ರೀ ಎಸ್ .ಬಂಗಾರಪ್ಪನವರು ಕಟ್ಟಡ ಶಿಲಾನ್ಯಾಸ ಕಾರ್ಯಕ್ರಮವನ್ನು ನೆರವೇರಿಸಿದರು. ಕುಲಪತಿ ಡಾ.ಚಂದ್ರಶೇಖರ ಕಂಬಾರರು ಅಧ್ಯಕ್ಷ ವಹಿಸಿದ್ದರು. ಕುಲಾಧಿಪತಿ ಶ್ರೀ ಎಸ್ .ಬಂಗಾರಪ್ಪನವರು ಮಾತನಾಡುತ್ತಾ ``ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಪುನಾರಚನೆಯ ಮಹತ್ವದ ಹೊಣೆಗಾರಿಕೆಯನ್ನು ಕನ್ನಡ ವಿಶ್ವವಿದ್ಯಾಲಯ ಹೊತ್ತಿದೆ. ಕೆಲಸದಲ್ಲಿ ಸಂಬಂಧಪಟ್ಟ ವಿದ್ವಾಂಸರ ತೀರ್ಮಾನವೇ ಅಂತಿಮವಾದುದು. ಸರಕಾರ ಇಂಥ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ'' ಎಂದರು. ಅವರು ಮುಂದುವರಿಯುತ್ತಾ ``ಭಾಷೆಯನ್ನು ಸಮೃದ್ಧಗೊಳಿಸು ಕೆಲಸ ನಿರಂತರವಾಗಿ ನಡೆಯುತ್ತಲೇ ಇರಬೇಕು. ಭಾಷೆ ಇನ್ನೊಂದು ಭಾಷೆಯ ಸಹಚರ್ಯದಿಂದಲೇ ಬೆಳೆಯಬೇಕು. ತನ್ನ ಬಾಷೆಯನ್ನು ಪ್ರೀತಿಸುವವನು ಇನ್ನೊಂದು ಭಾಷೆಯನ್ನು ದ್ವೇಷಿಸಬೇಕಾಗಿಲ್ಲ. ಆದ ನಮ್ಮ ಮೊದಲ ಪ್ರಾಶಸ್ತ್ಯ ನಮ್ಮ ಮಾತೃಭಾಷೆ-ಕನ್ನಡಕ್ಕಿರಬೇಕು. ರಾಜ್ಯದಲ್ಲಿ ಕನ್ನಡಕ್ಕೆ ಅಗ್ರಸ್ಥಾ ಇರಲೇಬೇಕು. ಕನ್ನಡಕ್ಕೆ ವಿಶ್ವಮಾನ್ಯತೆ ದೊರೆಯಲೇಬೇಕು.

ಹಂಪೆಯ ಐತಿಹಾಸಿಕ ಮಹೋನ್ನತಿಗೆ ಮತ್ತೊಮ್ಮೆ ಕಳೆಕಟ್ಟುವಂತೆ ಈ ವಿಶ್ವವಿದ್ಯಾಲಯ ಬೆಳೆಯಬೇಕು ಅಭಿಜಾತ ಸಾಹಿತ್ಯದೊಂದಿಗೆ ನಮ್ಮ ಜನಪದ ಸಾಹಿತ್ಯದ ಕಡೆಗೂ ಸಂಶೋಧಕರ ಕಣ್ಣು ಹಾಯಬೇಕು. ಕನ್ನಡ ವಿಶ್ವವಿದ್ಯಾಲಯದ ದೃಷ್ಟಿ ಪಾಮರರ ಕಡೆಗೂ ಇರಬೇಕು. ಇಲ್ಲಿನ ಕಟ್ಟಡಗಳಲ್ಲಿ ನಮ್ಮ ಪ್ರಾಚೀನ ವಾಸ್ತುಪರಂಪರೆಯ ಶೈಲಿ ಅಳವಡಬೇಕು. ಇದಕ್ಕೆ ಎಲ್ಲರ ನೆರವನ್ನು ಪಡೆದುಕೊಳ್ಳಬೇಕು.

ಸಮಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿದ ಕುಲಪತಿ ಡಾ.ಕಂಬಾರರು ೧೯೭೬ರ ಶಿವಮೊಗ್ಗೆಯ ಸಾಹಿತ್ಯಸಮ್ಮೇಳನದಲ್ಲಿ ಕನ್ನಡ ವಿಶ್ವವಿದ್ಯಾಲಯ ಕೊನೆಗೂ ನಮಗೆ ಬೇಕು ಎಂದಿರುವ ಮಾತನ್ನು ಸ್ಮರಿಸಿಕೊಂಡರು ಅವರು ಮುಂದುವರಿಸುತ್ತಾ ``ಕನ್ನಡ ಕನ್ನಡಿಗರೊಂದಿಗೆ ಹೇಗೋ ಹಾಗೆ ವಿಶ್ವದೊಂದಿಗೆ ಮಾತನಾಡಲು ಕಲಿಯಬೇಕು ಇಲ್ಲಿ ಕನ್ನಡ ಸಾಹಿತ್ಯದ ಶೋಧನೆಯಷ್ಟೇ ನಡೆಯುವುದಿಲ್ಲ. ವಿಜ್ಞಾನ, ಸಾಹಿತ್ಯ, ಕಲೆ, ಇತಿಹಾಸ, ಭಾಷಾಶಾಸ್ತ್ರ ಹೀಗೆ ಎಲ್ಲ ವಿಷಯಗಳ ಶೋಧನೆ ನಡೆದಾಗ ಕರ್ನಾಟಕ ಸಂಸ್ಕೃತಿಗೆ ಹೊಸ ಆಯಾಮ ಬರುತ್ತದೆ. ಕನ್ನಡ ವಿಶ್ವವಿದ್ಯಾಲಯ ಒಂದು ಮಹತ್ವಾಕಾಂಕ್ಷೆಯ ಗ್ರಂಥಾಲಯವನ್ನು ಕಟ್ಟಲು ಯೋಜಿಸಿದೆ. ಇದಕ್ಕೆ ಎಲ್ಲೆಡೆಯ ಪುಸ್ತಕ ದಾನಿಗಳು ಸಹಕರಿಸಬೇಕು'' ಎಂದರು.

## ಅಧ್ಯಯನಾಂಗ

ಅಧ್ಯಯನಾಂಗದಲ್ಲಿ ಭಾಷಾ ನಿಕಾಯ, ಸಮಾಜ ವಿಜ್ಞಾನಗಳ ನಿಕಾಯ, ಲಲಿತಕಲೆಗಳ ನಿಕಾಯಗಳು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ.

### ಭಾಷಾ ನಿಕಾಯ

ಭಾಷಾ ನಿಕಾಯದಲ್ಲಿ ಪ್ರಾಧ್ಯಾಪಕರು ವಿವಿಧ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಸಂಶೋಧನಾ ನಿರತರಾಗಿದ್ದಾರೆ. ಯೋಜನೆಗಳಿಗೆ ಪೂರಕವಾಗಿ ಮಾಹಿತಿ ಸಂಗ್ರಹಿಸಿ ಸಂಶೋಧನಾ ಸಹಾಯಕರ ನೆರವಿನಿಂದ ಯೋಜನೆಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಆಯಾ ಕ್ಷೇತ್ರಗಳಲ್ಲಿ ಪ್ರಮುಖರೆನಿಸಿದವರನ್ನು ಸಂಪರ್ಕಿಸುವುದು, ಕಮ್ಮಟಗಳನ್ನು ನಡೆಸುವುದು ಭಾಷೆಗಳ ಮೂಲಕ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಕೆಲಸ ನಡೆದಿವೆ.

### ಎಚ್.ಎಸ್.ರಾಘವೇಂದ್ರರಾವ್ (ಪ್ರಾಧ್ಯಾಪಕರು)

ಕರ್ನಾಟಕ ಕೋಶ ಯೋಜನೆಯ ನಿರ್ದೇಶಕ ಹಾಗೂ ಸಂಪಾದಕರಾಗಿ 1-11-1992ರಿಂದ ಕಾರ್ಯ ನಿರ್ವಹಣೆ.

### ಕರ್ನಾಟಕ ಕೋಶ ಯೋಜನೆ.

ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿಗಳ ಬಗ್ಗೆ ಕನ್ನಡೇತರರಿಗೆ ಸರಿಯಾದ ರೂಪದಲ್ಲಿ ಮಾಹಿತಿಯನ್ನು ಒದಗಿಸಬೇಕಾದುದು ನಮ್ಮ ಇಂದಿನ ಕರ್ತವ್ಯಗಳಲ್ಲೊಂದು . ಈ ಹಿನ್ನೆಲೆಯಲ್ಲಿ ಕನ್ನಡೇತರ ಓದುಗರನ್ನು ಲಕ್ಷ್ಯದಲ್ಲಿಟ್ಟುಕೊಂಡು `ಕರ್ನಾಟಕ ಕೋಶ' ಸಿದ್ಧಗೊಳ್ಳಲಿದೆ. ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಪ್ರಕಟವಾಗುವ ಈ ಕೋಶದ ರಚನೆಯಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವು ಪಡೆಯಲಾಗುವುದು. ಈ ಕೋಶದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ವ್ಯಕ್ತಿಗಳು, ಸ್ಥಳಗಳು, ಇತಿಹಾಸ, ಜಾನಪದ, ಧರ್ಮಗಳು, ಪ್ರಾಕೃತಿಕ ಸಂಪತ್ತು ಹೀಗೆ ಮುಖ್ಯ ವಿಭಾಗಗಳಿದ್ದು ಒಂದೊಂದು ವಿಭಾಗಕ್ಕೆ ವಿಭಾಗ ಸಂಪಾದಕರ ಪ್ರಸ್ತಾವನೆಯಿರುತ್ತದೆ. ೫೦೦ ಪುಟಗಳ ಈ ಕೋಶದಲ್ಲಿ ವರ್ಣರಂಜಿತ ಚಿತ್ರಗಳನ್ನು ಅಳವಡಿಸಿಕೊಳ್ಳಲಾಗುವುದು. ಇದು ಕರ್ನಾಟಕದ ಬಗೆಗಿನ ವಿಶಿಷ್ಟ ಆಕರ ಗ್ರಂಥವಾಗಲಿದೆ.

ಪ್ರಕಟಿತ ಲೇಖನಗಳು:

ವಿಮರ್ಶೆ-92, ಕನ್ನಡ ವಾರ್ಷಿಕ -1992, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಇತರ:

ಸಂಪಾದಕ – ಅನಿಕೇತನ , ಕರ್ನಾಟಕ ಸಾಹಿತ್ಯ ಅಕಾಡೆಮಿ.

ಮಲ್ಲೇಪುರಂ ಜಿ.ವೆಂಕಟೇಶ (ಪ್ರವಾಚಕರು)

ಕಾವ್ಯಶಾಸ್ತ್ರ ಪಾರಿಭಾಷಿಕ ಕೋಶ ಯೋಜನೆಯ ನಿರ್ದೇಶಕರು ಈ ಕೋಶದಲ್ಲಿ ಕಾವ್ಯ ಮೀಮಾಂಸೆಯ ಸುಮಾರು ೫೦೦ ಕ್ಕೂ ಹೆಚ್ಚು ಪರಿಕಲ್ಪನೆಗಳನ್ನು ವಿವೇಚಿಸಲಾಗುವುದು. ಕನ್ನಡ ಹಾಗೂ ಸಂಸ್ಕೃತ ಕಾವ್ಯಶಾಸ್ತ್ರ ಪಾರಿಭಾಷಿಕ ಪದಗಳನ್ನು ಸಾಧಾರವಾಗಿ ನಿರ್ವಚಿಸಲಾಗುವುದು. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಅಧ್ಯಯನಾಸಕ್ತರಿಗೆ ಮತ್ತು ಕಾವ್ಯಮೀಮಾಂಸೆಗಳ ತೌಲನಿಕ ಅಧ್ಯಯನಕ್ಕೆ ಈ ಕೋಶ ಕೈಪಿಡಿಯಾಗಲಿದೆ.

ಕನ್ನಡ ವಾರ್ಷಿಕ : 1992 ಸಂಪಾದಕರು.

ಪ್ರಕಟಿತ ಪುಸ್ತಕಗಳು :

01. ಪ್ರವಾಸ ಸಾಹಿತ್ಯ : ಒಂದು ಅಧ್ಯಯನ (ಸಂವಾದ)

02. ನಿಸರ್ಗ (ಸಂಪಾದಕ)

03. ಶಂಬಾ : ಕೃತಿ ಸಮೀಕ್ಷೆ (ಸಂಪಾದಕ)

ಲೇಖನಗಳು :

01. ಕನ್ನಡ ವಾರ್ಷಿಕ: 91 ರಲ್ಲಿ ಸಂಶೋಧನೆ ಮತ್ತು ಪ್ರಾಚೀನ ವಿಮರ್ಶೆ ಕುರಿತು ಲೇಖನ

೦೨. ಕನ್ನಡಪ್ರಭ ದೈನಿಕದಲ್ಲಿ ಕೆಲವು ಕಿರು ಲೇಖನಗಳು.

ಇತರ :

ಶಂಬಾ : ವಿಚಾರ ವೇದಿಕೆಯ ಉಪಾಧ್ಯಕ್ಷ, ಬೆಂಗಳೂರು.

ಡಾ.ರಹಮತ್ ತರೀಕೆರೆ : (ಪ್ರವಾಚಕರು)

ಕೈಗೊಂಡ ಯೋಜನೆ

01. ಪ್ರತಿ ಸಂಸ್ಕೃತಿ ಮತ್ತು ಆಧುನಿಕ ಕನ್ನಡ ಸಾಹಿತ್ಯ. ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರತಿಸಂಸ್ಕೃತಿ ಎಂಬ ವಿಶಿಷ್ಟ ಸಾಂಸ್ಕೃತಿಕ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಈ ಯೋಜನೆಯ ಉದ್ದೇಶ. ಆಳುವ ವರ್ಗದ ಸಂಸ್ಕೃತಿಯು ನಿರಾಕರಿಸಿರುವ ಹಲವಾರು ಸಂಸ್ಕೃತಿಯ ನೆಲೆಗಳು ನಾಶವಾಗದೆ, ಯಜಮಾನ ಸಂಸ್ಕೃತಿಗೆ ಪ್ರತಿರೋಧವೊಡ್ಡಿಕೊಂಡೇ ತಮ್ಮ ಚೈತನ್ಯವನ್ನು ಉದ್ದಕ್ಕೂ ಉಳಿಸಿಕೊಂಡಿದೆ. ಇಂತಹ ನಿರ್ಲಕ್ಷಿತ ಸಾಂಸ್ಕೃತಿಕ ನೆಲೆಗಳಿಂದ ಕನ್ನಡ ಸಾಹಿತ್ಯವನ್ನು ನೋಡುವುದು ಹಾಗೂ ಒಟ್ಟು ಸಂಸ್ಕೃತಿಯ ಯಾವುದೇ ಅಂಶಗಳನ್ನು ನಿರಾಕರಿಸದೆ ಅಥವಾ ಸಮರ್ಥಿಸದೆ ಆರೋಗ್ಯಕರ ದೃಷ್ಟಿಯಲ್ಲಿ ವಿಮರ್ಶಿಸುವುದು ಮತ್ತು ವ್ಯಾಖ್ಯಾನಿಸುವುದು ಈ ಯೋಜನೆಯ ಗುರಿಯಾಗಿದೆ.

೦೨. `ಕರ್ನಾಟಕ ಜಾನಪದ' - ಜಂಟಿ ಯೋಜನೆಯಲ್ಲಿ ಕೆಲವು ಅಧ್ಯಾಯಗಳ ಬರವಣಿಗೆ :

ಪ್ರಕಟಿತ ಪುಸ್ತಕಗಳು :

01. ಸಾಹಿತ್ಯ ವಿಮರ್ಶೆ -1992 (ಸಂಪಾದನೆ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಲೇಖನಗಳು

೦೧. ಕರ್ನಾಟಕ ಸಂಸ್ಕೃತಿ ನನ್ನ ಗ್ರಹಿಕೆಗಳು - ಸಿರಿಗನ್ನಡ, ಸಂ : ಎಚ್.ಎಸ್.ರಾಘವೇಂದ್ರರಾವ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೦೨. ೧೯೯೨ರ ಸಂಶೋಧನೆಗಳು - ಕನ್ನಡ ವಾರ್ಷಿಕ (ಸಂ) ಮಲ್ಲೇಪುರಂ ಜಿ.ವೆಂಕಟೇಶ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೩. ಮಧ್ಯಕಾಲೀನ ಸಾಹಿತ್ಯದಲ್ಲಿ ನೋವಿನ ನೆಲೆಗಳು, ಸಂ : ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೦೪. ಪುರಾಣದ ಪುನರ್ ವ್ಯಾಖ್ಯಾನಗಳಲ್ಲಿ ಹೊಸಚರಿತ್ರೆಯ ಕನಸುಗಳು, ಕನ್ನಡ ಸಾಹಿತ್ಯದಲ್ಲಿ ಪುರಾಣ ಮತ್ತು ಚರಿತ್ರೆ.

೦೫. ಅಮರಚಿಂತರ ಕಾವ್ಯ - ಅಮರಚಿಂತ ಕಾವ್ಯ ಕೃತಿಗೆ ಮುನ್ನುಡಿ.

೦೬. ಗ್ರಾಮದೇವತೆಗಳು ಹಾಗೂ ಊರೊಟ್ಟಿನ ಸಂಬಂಧ - ಸಂಕ್ರಮಣ ಜುಲೈ -1993.

ಇತರ

೦೧. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಗ್ರಾಮದೇವತೆಗಳು - ವಿಚಾರ ಸಂಕಿರಣದಲ್ಲಿ ವಿಚಾರ ಮಂಡನೆ.

೦೨. ಜೋಳದರಾಶಿ ದೊಡ್ಡನಗೌಡರು, ವ್ಯಾಕರಣ ತೀರ್ಥ ಚಂದ್ರಶೇಖರಶಾಸ್ತ್ರಿಯವರನ್ನು ಕುರಿತು ಸಾಕ್ಷ್ಯಚಿತ್ರ ನಿರ್ಮಾಣದಲ್ಲಿ ನೆರವು.

ಪ್ರೊ.ಕಿ.ರಂ.ನಾಗರಾಜ (ಪ್ರತಿನಿಯೋಜನ ಪ್ರಾಧ್ಯಾಪಕರು)

---

ತೋಂಡಿ ಮತ್ತು ಬರಹದ ಸಾಹಿತ್ಯ

ಕನ್ನಡ ಕವಿಗಳು ರೂಪಿಸಿರುವ ಚಿಂತನೆಯನ್ನೇ ಪ್ರಧಾನವಾಗಿ ಬಳಸಿಕೊಂಡು ಮೌಖಿಕ ಮತ್ತು ಲಿಖಿತ ಸಾಹಿತ್ಯಗಳ ಪರಸ್ಪರ ಕೊಳುಕೊಡುಗೆಗಳ ಪ್ರಕ್ರಿಯೆಯ ಅಧ್ಯಯನವಿದು . ಶುದ್ಧಾಂಗವಾದ ಮೌಖಿಕ ಪರಂಪರೆಯ ಮೇಲೆ ಬರಹರೂಪ ದಟ್ಟವಾದ ಪ್ರಭಾವವನ್ನು ಬೀರಿದೆ. ಮೌಖಿಕ ಸಂಸ್ಕೃತಿಯ ಸಾಹಿತ್ಯಕ ರಚನೆಗಳು ಲಿಪಿ ಸಂಸ್ಕೃತಿಗೆ ಗುರಿಯಾಗಿದ್ದು . ಲಿಪಿ ಸಂಸ್ಕೃತಿಯ ಗ್ರಹಿಕೆಗಳ ನೆಲೆಯಿಂದಲೇ ಮೌಖಿಕ ಸಂಸ್ಕೃತಿಯ ಸಂದರ್ಭವನ್ನು ವಿವರಿಸಲಾಗುತ್ತಿದೆ. ಆಚರಣಬದ್ಧವಾದ ಮೌಖಿಕ ಅಭಿವ್ಯಕ್ತಿಯು ಲಿಪಿಬದ್ಧ ಸಂಸ್ಕೃತಿಗೆ ಒಳಪಡುವಾಗ, ಮೌಖಿಕ ಪರಂಪರೆಯ ಸ್ವರೂಪವನ್ನು ಅದು ಕಳೆದುಕೊಳ್ಳುವ ಬಗೆಯನ್ನು ಕುರಿತ ಅಧ್ಯಯನವಿದು.

ಅಮರೇಶ ನುಗಡೋಣಿ : (ಸಂಶೋಧನಾ ಸಹಾಯಕ)

ಕರ್ನಾಟಕ ಕೋಶ ಯೋಜನೆಗೆ ನೆರವು
ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಕಲವ್ಯ ಎಂ.ಫಿಲ್ ಗಾಗಿ ನಿಬಂಧ ರಚನೆ.

ಪ್ರಕಟಿತ ಲೇಖನ

೦೧.ಮಕ್ಕಳ ಸಾಹಿತ್ಯ - 1992, ಕನ್ನಡ ವಾರ್ಷಿಕ -1992, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೨.ಮಕ್ಕಳ ಸಾಹಿತ್ಯ - 1993, ಕನ್ನಡ ವಾರ್ಷಿಕ -1993, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೩. ನವ್ಯ ಸಾಹಿತ್ಯದಲ್ಲಿ ಆಧುನಿಕ ಮನುಷ್ಯನ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ.

ಪ್ರಶಸ್ತಿಗಳು :

ಮಣ್ಣು ಸೇರಿತು ಬೀಜ ಕಥಾಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ.

ಎಫ್. ಟಿ. ಹಳ್ಳಿಕೇರಿ (ಸಂಶೋಧನಾ ಸಹಾಯಕ)

೦೧. ೧೯೯೨ ಅಕ್ಟೋಬರ್ ನಿಂದ ಸಂಶೋಧನ ಕರ್ನಾಟಕ ಯೋಜನೆಗೆ ಕ್ಷೇತ್ರಕಾರ್ಯದಲ್ಲಿ ನೆರವು.

೦೨. ಡಿಸೆಂಬರ್ ನಲ್ಲಿ ಕರ್ನಾಟಕ ಕೋಶ ಯೋಜನೆಗೆ ಸಹಾಯಕನಾಗಿ ನಮೂದುಗಳನ್ನು ದಾಖಲಿಸಿದುದು.

೦೩. ಕೆರೆಯ ಪದ್ಮರಸ ಕುಟುಂಬವರ್ಗ - ಒಂದು ಅಧ್ಯಯನ, ಎಂಬ ವಿಷಯದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಿ.ಎಚ್ .ಡಿ.ಗಾಗಿ ಡಾ.ವೀರಣ್ಣ ರಾಜೂರ ಇವರ ಮಾರ್ಗದರ್ಶನದಲ್ಲಿ ನೋಂದಾಯಿಸಿದ್ದು, ಸಂಶೋಧನೆ ಪ್ರಗತಿಯಲ್ಲಿದೆ.

ಪ್ರಕಟಿತ ಲೇಖನಗಳು :

ಚಿತ್ತಾಲರ ಪಯಣ - ಒಂದು ಟಿಪ್ಪಣಿ, ಕಥನ ಕಲೆಯ ನೆಲೆಗಳು, ಅಕ್ಟೋಬರ್ ೧೯೯೩.

ವೈಜ್ಞಾನಿಕ ಕ್ಷೇತ್ರಕಾರ್ಯ, ಸತ್ಯಶುದ್ಧ ಕಾಯಕ, 3-1,2 ಫೆಬ್ರುವರಿ ೧೯೯೩

ತಿಂಥಿಣಿ ಮೋನಪ್ಪಯ್ಯ (ಗ್ರಂಥಾವಲೋಕನ) ಕರ್ನಾಟಕ ಭಾರತಿ ೨-೧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -1993

ಮಾನವ ಸಂಪನ್ಮೂಲ ಸಂವರ್ಧನೆ, ಪುಸ್ತಕ ಮಾಹಿತಿ ಸಂಪುಟ -1, ಸಂಚಿಕೆ -12, 1993, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಗವಹಿಸಿದ ಶಿಬಿರಗಳು :

1992 ಅಕ್ಟೋಬರ್ ೨೮ ರಿಂದ ೩೧ರ ವರೆಗೆ ರಾಯಚೂರಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ನಡೆಸಿದ `ಕಥನ ಕಲೆಯ ನೆಲೆಗಳು ' ಕಮ್ಮಟದಲ್ಲಿ ಕಮ್ಮಟಾರ್ಥಿಯಾಗಿ

1993ಮಾರ್ಚ್‌ನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗುಲ್ಬರ್ಗಾದಲ್ಲಿ ಏರ್ಪಡಿಸಿದ್ದ ''ಭಾಷಾಂತರದ ನೆಲೆಗಳು`` ಕಮ್ಮಟದಲ್ಲಿ ಕಮ್ಮಟಾರ್ಥಿಯಾಗಿ

ಬಾಪೂಗೌಡ : (ಸಂಶೋಧನಾ ಸಹಾಯಕ)

ಕರ್ನಾಟಕ ಕೋಶ ಯೋಜನೆಗೆ ಅಲ್ಪಾವಧಿಯ ನೆರವು.

ಲಕ್ಷ್ಮೀದೇವಿ. ಎಲ್. (ಸಂಶೋಧನಾ ಸಹಾಯಕಿ)

ತೋಂಡಿ ಮತ್ತು ಬರಹ, ಕನ್ನಡ ಕಾವ್ಯದಲ್ಲಿ ಕಾವ್ಯಾಂಶಗಳು – ಕಾವ್ಯ ಮೀಮಾಂಸೆಯ ಅಂಶಗಳು, ಸಾಹಿತ್ಯ ಈ ಶತಮಾನದ ನೋಟ–ಬೇಂದ್ರೆ ಇತ್ಯಾದಿ ಯೋಜನೆಗಳಲ್ಲಿ ನೆರವು. ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿ.

ಸಂದರ್ಶಕ ಪ್ರಾಧ್ಯಾಪಕರು

ಟಿ.ಪಿ.ಅಶೋಕ

ಕೈಗೊಂಡ ಯೋಜನೆ :–
20 ನೆಯ ಶತಮಾನದ ಕನ್ನಡ ಸಾಹಿತ್ಯ :
20 ನೆಯ ಶತಮಾನದ ಕನ್ನಡ ಸಾಹಿತ್ಯದ ಹಿಂದಿನ ಪ್ರೇರಣೆಯನ್ನು ಅಭ್ಯಸಿಸಿ ಆ ಮೂಲಕ ಇಂದಿನ ಕನ್ನಡ ಸಾಹಿತ್ಯದ ಸ್ವರೂಪವನ್ನು ಗುರುತಿಸಿಕೊಂಡು, ಪ್ರಮುಖ ಸಾಧನೆಗಳ ಬೆಲೆ ಕಟ್ಟುವುದು. ಈ ವಸಾಹತುಶಾಹಿ ಚಟುವಟಿಕೆಗಳು, ಸುಧಾರಣಾ ಚಳುವಳಿಗಳು, ಭಾಷಾ ಚಳುವಳಿಗಳು ಮುಂತಾದ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಭವಗಳ ಹಿನ್ನೆಲೆಯಲ್ಲಿ ೨೦ ನೆಯ ಶತಮಾನದ ಮುಖ್ಯ ಕನ್ನಡ ಕೃತಿಗಳನ್ನು ವಿವರವಾಗಿ ಚರ್ಚಿಸುವುದು. ಸಂಶೋಧನೆ ಚರಿತ್ರೆ ಮತ್ತು ವಿಮರ್ಶೆ ಈ ಮೂರು ದಿಕ್ಕುಗಳಿಂದ ಕನ್ನಡ ಸಾಹಿತ್ಯವನ್ನು ಪರಿಭಾವಿಸುವುದು ಈ ಯೋಜನೆಯ ಉದ್ದೇಶಗಳು.

ಕಛೇರಿ

ಶ್ರೀನಿವಾಸ, ಡಿ.ಪ್ರಭಾ ಮತ್ತು ಶಶಿಕುಮಾರ್ (ಕಿರಿಯ ಸಹಾಯಕರು) ನಾಗರಾಜ ಬಡಿಗೇರ ಭಾಷಾನಿಕಾಯದ ಕಛೇರಿಯ ಕೆಲಸಗಳನ್ನು ನಿರ್ವಹಿಸಿದ್ದರು.

## ಭಾಷಾಂತರ ವಿಭಾಗ

**ಪ್ರಸ್ತಾವನೆ:**

ಹಂಪಿಯಲ್ಲಿ ಮಾರ್ಚ್ ೨೨ ಮತ್ತು ೨೩.೧೯೯೨ ರಂದು ಕುಲಪತಿಗಳ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಅನುವಾದದ ಸಭೆ ನಡೆಯಿತು. ಈ ಸಭೆಯಲ್ಲಿ ನಾಡಿನ ವಿದ್ವಾಂಸರಾದ ಡಾ. ಜಿ.ಎಸ್.ಶಿವರುದ್ರಪ್ಪ, ಡಾ. ದೇ.ಜವರೇಗೌಡ, ಪ್ರೊ.ಜಿ.ಎಸ್ . ಸಿದ್ಧಲಿಂಗಯ್ಯ, ಶ್ರೀ .ಬಿ.ವಿ. ಕಾರಂತ, ಶ್ರೀ ಕೆ.ವಿ.ಸುಬ್ಬಣ್ಣ, ಡಾ. ಕಾಳೇಗೌಡ ನಾಗವಾರ, ಶ್ರೀ .ಟಿ.ಪಿ. ಅಶೋಕ ಅವರು ಭಾಗವಹಿಸಿದ್ದರು. ಕನ್ನಡ ವಿಶ್ವವಿದ್ಯಾಲಯವು ಅನುವಾದ ಯೋಜನೆಗಳನ್ನು ಖಾಯಂ ಆಗಿ ಕೈಗೆತ್ತಿಕೊಳ್ಳಬೇಕೆಂದು ಅಭಿಪ್ರಾಯಪಡಲಾಯಿತು. ದ್ರಾವಿಡ ಭಾಷೆಗಳ ಅನುವಾದವನ್ನು ಕೈಕೊಳ್ಳುವ ಬಗ್ಗೆ, ಭಾರತೀಯ ಇತರ ಭಾಷೆಗಳ ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಕೃತಿಗಳ ಅನುವಾದವನ್ನು ಹಮ್ಮಿಕೊಳ್ಳುವ ಬಗ್ಗೆ ಸಭೆ ಸಲಹೆ ನೀಡಿತು . ಅನುವಾದ ಕಾರ್ಯ ವ್ಯವಸ್ಥಿತವಾಗಿ ನಡೆಯಬೇಕೆಂದು, ಉಪನ್ಯಾಸಗಳು . ಪ್ರಕಟಣೆಗಳು, ಶಿಬಿರಗಳು ಇವುಗಳ ಮೂಲಕ ಅನುವಾದ ಕಾರ್ಯಕ್ಕೆ ಚಾಲನೆ ಕೊಡಬಹುದೆಂದು ಸಭೆ ಅಭಿಪ್ರಾಯಪಟ್ಟಿತು.

ಅನ್ಯ ಬಾಷೆಗಳಲ್ಲಿ ಲಭ್ಯವಿರುವ ಜ್ಞಾನವನ್ನು ಕನ್ನಡದಲ್ಲಿಯೇ ಒದಗಿಸಬೇಕೆಂಬ ಎಂಬ ಮಹತ್ವಾಕಾಂಕ್ಷೆಗೆ ಪೂರಕವಾಗಿ ಕನ್ನಡ ವಿಶ್ವವಿದ್ಯಾಲಯವು ಭಾಷಾಂತರ ವಿಭಾಗವನ್ನು ಆರಂಭಿಸಿದೆ. ಅನ್ಯಭಾಷೆಯ ಪ್ರಮುಖ ಕೃತಿಗಳನ್ನು  ಕನ್ನಡದಲ್ಲಿ ಒದಗಿಸುವುದು ಅಲ್ಲದೆ ಕನ್ನಡದ ಪ್ರಮುಖ ಕೃತಿಗಳನ್ನು ಇತರ ಭಾಷೆಗಳಿಗೆ ಒದಗಿಸುವ ಮೂಲಕ ಒಂದು ರೀತಿಯ ಸಾಂಸ್ಕೃತಿಕ ವಿನಿಮಯ ಕೇಂದ್ರವಾಗಿ ಭಾಷಾಂತರ ವಿಭಾಗ ರೂಪುಗೊಳ್ಳಲಿದೆ. ದೇಶ ವಿದೇಶಗಳ ಭಾಷೆಗಳಲ್ಲದೆ ನಮ್ಮ ನೆರೆಯ ದ್ರಾವಿಡ ಭಾಷೆಗಳನ್ನು ಕನ್ನಡ ಭಾಷೆಯ ಮೂಲಕ ಪ್ರವೇಶಿಸಲು ಅನುಕೂಲ ಮಾಡಿಕೊಡುವುದರ ಮೂಲಕ ಭಾಷಾಂತರ ವಿಭಾಗ ಕನ್ನಡಿಗರಿಗೆ ನೆರವಾಗಲಿದೆ.

ಈ ಶೈಕ್ಷಣಿಕ ವರ್ಷಾರಂಭದಲ್ಲಿ ಓ.ಎಲ್ .ನಾಗಭೂಷಣಸ್ವಾಮಿ ಅವರು ಪ್ರತಿನಿಯೋಜನೆಯ ಮೇರೆಗೆ ಭಾಷಾಂತರ ವಿಭಾಗದ ಪ್ರಾಧ್ಯಾಪಕ ಮುಖ್ಯಸ್ಥರಾಗಿ ನೇಮಕವಾದರು.

### ವಿಭಾಗದ ಯೋಜನೆಗಳು – ಪುರಾಣ ಕೋಶ.

ಮನುಷ್ಯನ ಅಭಿವ್ಯಕ್ತಿಯ ಪ್ರಮುಖ ರೂಪಗಳಲ್ಲಿ ಪುರಾಣವೂ ಒಂದು ಕನ್ನಡದ ಓದುಗರಿಗೆ ಇದೇ ಮೊದಲ ಬಾರಿಗೆ ಜಗತ್ತಿನ ಪ್ರಮುಖ ಪುರಾಣಗಳ ಮಾಹಿತಿ ಒಂದೆಡೆಯಲ್ಲಿ ಲಭ್ಯವಾಗುವಂತೆ ರೂಪಿತವಾಗಿರುವ ಯೋಜನೆ ಇದು. ಈ ಕೋಶವು ಕೇವಲ ನಿಘಂಟಲ್ಲ. ಇದು ಭಾರತದ ಮತ್ತು ಜಗತ್ತಿನ ಮುಖ್ಯ ಪುರಾಣಗಳನ್ನು ಪರಿಚಯ ಮಾಡಿಕೊಡಲಿದೆ. ಹಿಂದೂ, ಭೌದ್ಧ, ಜೈನ ಮತ್ತು ಶೈವ ಪುರಾಣಗಳೊಂದಿಗೆ ಇಸ್ಲಾಂ ಮತ್ತು ಕ್ರಿಶ್ಚಿಯನ್ ಪುರಾಣಗಳನ್ನು ಒಳಗೊಂಡಂತೆ. ಕೆಲವು ಮುಖ್ಯ ಪೌರ್ವಾತ್ಯ ಪಾಶ್ಚಾತ್ಯ ಪುರಾಣಗಳನ್ನು ತೌಲನಿಕವಾಗಿ ವಿವೇಚಿಸಲಾಗುವುದು ಮುಖ್ಯವಾಗಿ ಪುರಾಣ ಪುರುಷರು, ಘಟನೆಗಳು, ಪರಿಕಲ್ಪನೆಗಳು ಹಾಗೂ ಅವುಗಳಿಗೆ ಸಂಬಂಧಪಟ್ಟ ಸಂಕ್ಷಿಪ್ತ ಕಥಾ ಸಾರಾಂಶಗಳೊಂದಿಗೆ ವಿವಿಧ ಜ್ಞಾನಶಾಖೆಗಳು ಪುರಾಣಗಳನ್ನು ವಿವೇಚಿಸಿರುವ ಬಗೆಗೂ ಈ ಕೋಶದಲ್ಲಿ ಮಾಹಿತಿಗಳನ್ನು ದಾಖಲಿಸಲಾಗುವುದು. ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ , ಧರ್ಮಗಳ ತೌಲನಿಕ ಅಧ್ಯಯನ ನಡೆಸುವವರಿಗೆ, ಜಾನಪದ

ಅಧ್ಯಯನಗಳಲ್ಲಿ ಆಸಕ್ತಿ ಉಳ್ಳವರಿಗೆ ಮತ್ತು ಪುರಾಣ ಕತೆಗಳಲ್ಲಿ ಆಸಕ್ತಿಯಿರುವ ಸಾಮಾನ್ಯ ಓದುಗರಿಗೆ ಈ ಕೋಶ ಉಪಯುಕ್ತವೆನಿಸುವುದು. ಇದರಲ್ಲಿ ಸುಮಾರು ಎರಡು ಸಾವಿರ ನಮೂದುಗಳನ್ನು ದಾಖಲಿಸುವ ಉದ್ದೇಶವಿದೆ.

ಪ್ರೊ.ಓ.ಎಲ್.ನಾಗಭೂಷಣಸ್ವಾಮಿ (ಪ್ರತಿನಿಯೋಜಿತ ಪ್ರಾಧ್ಯಾಪಕ, ಮುಖ್ಯಸ್ಥರು)

ಪ್ರಸಾರಾಂಗದ ನಿರ್ದೇಶಕರಾಗಿ. ಯೋಜನಾಧಿಕಾರಿಯಾಗಿ ಭಾಷಾನಿಕಾಯದ ಡೀನ್ ಆಗಿಯೂ ಹೆಚ್ಚುವರಿ ಹೊಣೆಯನ್ನು ನಿರ್ವಹಿಸಿದ್ದಾರೆ.

ಪುರಾಣ ಕೋಶ ಸಂಪಾದಕ

ಪ್ರಕಟಿತ ಕೃತಿಗಳು.

ಪುರಾಣ – ಮಂಟಪಮಾಲೆ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲೇಖನಗಳು :

ಭಾಷಾಂತರ ಕೃತಿಗಳು – 92 (ಲೇಖನ) – ಕನ್ನಡ ವಾರ್ಷಿಕ ೧೯೯೨ ಪ್ರಸಾರಾಂಗ.

ಸಾಹಿತ್ಯ ವಿಮರ್ಶೆ ೯೧ರ ಕನ್ನಡ ವಾರ್ಷಿಕಕ್ಕೆ (ಲೇಖನ)–ಕನ್ನಡ ವಾರ್ಷಿಕ –1991 ಕನ್ನಡ ವಿಶ್ವವಿದ್ಯಾಲಯ.

ಜನಪ್ರಿಯ ಸಂಸ್ಕೃತಿ : ಕೆಲವು ವಿಚಾರಗಳು – ಸಿರಿಗನ್ನಡ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಪಿ. ಎಚ್.ಡಿ.ಮಾರ್ಗದರ್ಶನ (ನೋಂದಾಯಿಸಲಾಗಿದೆ)

ಆರ್ .ವೆಂಕಟೇಶ–ಜನಪದ ನಾಟಕಗಳು ಮತ್ತು ಆಧುನಿಕ ಕನ್ನಡ ನಾಟಕಗಳ ಸಂಬಂಧ ಸ್ವರೂಪ ಅಧ್ಯಯನ.

ಶ್ರೀಮತಿ ಪ್ರತಿಭಾ ನಂದಕುಮಾರ್–ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಗಳ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಮಕ್ಕಳ ಸಾಹಿತ್ಯ.

ಇತರ :

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆಸಿದ ಭಾಷಾಂತರದ ನೆಲೆಗಳು ಕಮ್ಮಟದ ನಿರ್ದೇಶಕರಾಗಿದ್ದರು.

ಎ.ಮೋಹನ್ ಕುಂಟಾರ್ (ಯೋಜನಾ ಸಹಾಯಕ)

ಸಂಶೋಧನಾ ಕರ್ನಾಟಕ ಯೋಜನೆಯಲ್ಲಿ ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹಣೆ, ಪುರಾಣಕೋಶ ಯೋಜನೆಯಲ್ಲಿ ನೆರವು.

ಪ್ರಕಟಿತ ಲೇಖನಗಳು :

ಹೆಜ್ಜೆ ಮೂಡಿದ ಹಾದಿ – ಪುಸ್ತಕ ವಿಮರ್ಶೆ (ಸಂಕ್ರಮಣ) .

ಅಮೀನಪುರದಲ್ಲಿ ಸಂತೆ – ಪುಸ್ತಕ ವಿಮರ್ಶೆ (ಸಂಕ್ರಮಣ) .

ಬುತ್ತಿ (ಕತೆ, ಮಲೆಯಾಳಂನಿಂದ ಅನುವಾದ) – ಸಂಯುಕ್ತ ಕರ್ನಾಟಕ.


ಪಾವೆಂ . ಆಚಾರ್ಯ - ಕನ್ನಡ ವಾರ್ಷಿಕ -1992, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಇತರ :
ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ನಡೆಸಿದ ಭಾಷಾಂತರದ ನೆಲೆಗಳು, ಕಮ್ಮಟದಲ್ಲಿ ಅಭ್ಯರ್ಥಿ.

ವಿಠಲ್ ರಾವ್ ಟಿ (ಯೋಜನಾ ಸಹಾಯಕರು)

ಸಂಶೋಧನಾ ಕರ್ನಾಟಕ ಯೋಜನೆಗೆ ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹಣೆಗಾಗಿ ನೆರವು, ಪುರಾಣ ಕೋಶ ಯೋಜನೆಗೆ ನೆರವು.
ಪ್ರಕಟಿತ ಬರೆಹಗಳು :
ಕವನ : ಮೂಕ ಸಾಕ್ಷಿಗಳು : ಮುಂಗಾರು, ೨೪.೦೧.೧೯೯೩
ಕಾರಂತರ ಕಾದಂಬರಿಗಳಲ್ಲಿ ವ್ಯಕ್ತಿ ಮತ್ತು ಜೀವನದೃಷ್ಟಿ, ಸತ್ಯಶುದ್ಧ ಕಾಯಕ : 2, -6, ಆಗಸ್ಟ್ - ಡಿಸೆಂಬರ್ ತೌಲನಿಕ ಭಾರತೀಯ ಸಾಹಿತ್ಯ : ಸಮಸ್ಯೆಗಳು ಮತ್ತು ಪರಿಪ್ರೇಕ್ಷ್ಯಗಳು. (ಅನುವಾದ) ಅನಿಕೇತನ : 5-4-ಜನವರಿ- ಮಾರ್ಚ್
`ಎಂ.ಎಸ್ .ಸುಂಕಾಪುರ ' -ವ್ಯಕ್ತಿ ಚಿತ್ರ, ಕನ್ನಡ ವಾರ್ಷಿಕ -1992, ಕನ್ನಡ ವಿಶ್ವವಿದ್ಯಾಲಯ, ಹಂಪಿ
`ಮಾತು - ಚಿಂತನೆ ' ತರಳಬಾಳು -13-2, ನವೆಂಬರ್ - ಡಿಸೆಂಬರ್ ೧೯೯೨
ಭಾಷಣ : ಭದ್ರಾವತಿ ಆಕಾಶವಾಣಿ ನಿಲಯದಿಂದ ಬಿತ್ತರಗೊಂಡಿದೆ.
ಭಾಷೆ ಮತ್ತು ಪ್ರಾಂತೀಯತೆ 14-11-1992.

ಶ್ರೀಮತಿ ರೇಣು (ಸಂಶೋಧನಾ ಸಹಾಯಕರು)

ಪುರಾಣ ಕೋಶ ಯೋಜನೆಗೆ ಅಲ್ಪಾವಧಿ ನೆರವು.



## ಭಾಷಾ ವಿಜ್ಞಾನ ವಿಭಾಗ (1992-93)

ಕನ್ನಡ ಭಾಷೆಗೆ ಸಂಬಂಧಿಸಿದ ಸಂಶೋಧನೆಗಳು, ಅಧ್ಯಯನಗಳು, ಕೋಶ ರಚನೆ ಇತ್ಯಾದಿ ಕಾರ್ಯ ಯೋಜನೆಗಳು ಈ ವಿಭಾಗದ ವ್ಯಾಪ್ತಿಯಲ್ಲಿ ಬರುತ್ತದೆ. ಕನ್ನಡದ ವಿವಿಧ ಉಪಭಾಷೆಗಳ , ವಿವಿಧ ವೃತ್ತಿಗಳ ಜನ ಬಳಕೆಯ ಭಾಷಿಕ ವೈಶಿಷ್ಟ್ಯಗಳು, ಪದ ನಿವೃತ್ತಿ, ಪ್ರೇರಣೆ, ಪ್ರಭಾವಗಳನ್ನು ಗುರುತಿಸುವ ವೈಜ್ಞಾನಿಕ ಮಾದರಿಯ ಸಂಶೋಧನೆಗೆ ಪ್ರಮುಖವಾಗಿ ಒತ್ತು ಕೊಡಲಾಗುವುದು.

### ವಿಭಾಗದ ಯೋಜನೆಗಳು

ಕೃಷಿ ಪದಕೋಶ : ಕರ್ನಾಟಕದಾದ್ಯಂತ ಬಳಕೆಯಲ್ಲಿರುವ ಕೃಷಿಸಂಬಂಧಿ ಪದಗಳನ್ನು ಈ ಯೋಜನೆಯ ಉದ್ದೇಶ ಕೃಷಿ ವಲಯದ ಪದಗಳು ಚಲನಶೀಲವಾಗಿರುಸವ ಸ್ವರೂಪವನ್ನು, ಅದರ ಹಿಂದಿನ ಸಾಮಾಜಿಕ, ಸಾಂಸ್ಕೃತಿಕ, ಒತ್ತಡಗಳನ್ನು ಗ್ರಹಿಸುವುದರ ಜೊತೆಗೆ ವರ್ತಮಾನದ ಭಾಷಿಕ ಅವಸ್ಥಾಂತರ ಸ್ವರೂಪವನ್ನು ದಾಖಲಿಸಲಾಗುವುದು. ಈ ಯೋಜನೆಗೆ ಆಯಾ ಪ್ರದೇಶದ ತಿಳುವಳಿಕೆ ಉಳ್ಳ ಕ್ಷೇತ್ರ ಸಹಾಯಕರಿಂದ ವ್ಯಾಪಕ ಸರ್ವೇಕ್ಷಣೆ ನಡೆಸಿ ಪದಗಳನ್ನು ಸಂಗ್ರಹಿಸಲಾಗುವುದು. ಕನ್ನಡ ಭಾಷೆಯ ಸನ್ನಿವೇಶದಲ್ಲಿ ನಡೆಯುತ್ತಿರುವ ಆಧುನೀಕರಣ ಪ್ರಕಿಯೆಯನ್ನು ಅರಿಯುವಲ್ಲಿ ಈ ಕೋಶ ಪ್ರಮುಖ ಆಕರವಾಗಲಿದೆ. ಯೋಜನೆಯ ನಿರ್ದೇಶಕರು . ಡಾ.ಕೆ.ವಿ.ನಾರಾಯಣ.

### ಕಮ್ಮಟಗಳು

ಕೃಷಿಪದಕೋಶ ಕ್ಷೇತ್ರ ಮಾಹಿತಿ ಕಮ್ಮಟ

ಕೃಷಿಪದಕೋಶ ರಚನೆಗೆ ಅಗತ್ಯವಾದ ಕ್ಷೇತ್ರ ಮಾಹಿತಿಯನ್ನು ಸಂಗ್ರಹಿಸುವ ಬಗೆಗೆ ಒಂದು ಕಮ್ಮಟವನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನವೆಂಬರ್ ೨೭ ಮತ್ತು ೨೮,೧೯೯೨ ರಂದು ನಡೆಸಲಾಯಿತು. ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಅವಶ್ಯ ಕ್ಷೇತ್ರ ಮಾಹಿತಿಯನ್ನು ಸಂಗ್ರಹಿಸುವ ನಿಯೋಜಿತರಾಗಿರುವ ಹದಿನೈದದು ಜನ ಸಹಾಯಕರು ಈ ಕಮ್ಮಟದಲ್ಲಿ ಭಾಗವಹಿಸಿದ್ದರು. ಡಾ.ವಿಲಿಯಂ ಮಾಡ್ತ, ಡಾ.ಸಂಗಮೇಶ ಸವದತ್ತಿ ಮಠ ಮತ್ತು ಶ್ರೀ ಆರ್.ವೈ.ಕುಲಕರ್ಣಿ ಇವರು ಪದಕೋಶ ಪದಕೋಶ ರಚನೆ, ವಿಧಾನಗಳ ಬಗೆಗೆ ವಿವರಣೆ ನೀಡಿದರು.

### ಸಿಬ್ಬಂದಿಗಳ ವಿವರ

ಡಾ.ಕೆ.ವಿ.ನಾರಾಯಣ (ಪ್ರಾಧ್ಯಾಪಕ ಮುಖ್ಯಸ್ಥರು)

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕಾರ್ಯನಿರ್ವಹಣೆ.

ಭಾಷಾನಿಕಾಯದ ಡೀನ್ ಹಾಗೂ ಅಧ್ಯಯನಾಂಗದ ನಿರ್ದೇಶಕರಾಗಿ ಹೆಚ್ಚುವರಿ ಹೊಣೆ. ಕೃಷಿಪದಕೋಶದ ನಿರ್ದೇಶಕರು.

ಪ್ರಕಟಣೆಗಳು

ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ನೆಲೆಗಳು : ಇದೇ ಹೆಸರಿನ ಗ್ರಂಥದಲ್ಲಿ ಆಶಯ ಲೇಖನ; ಕರ್ನಾಟಕ ಸಾಹಿತ್ಯ ಅಕಾಡೆಮಿ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರಭು ಭೃತ್ಯಸಂಬಧ–ಕನ್ನಡ ಸಾಹಿತ್ಯದ ಹಿಂಸೆಯ ನೆಲೆಗಳು ಕರ್ನಾಟಕಕ ಸಾಹಿತ್ಯ ಅಕಾಡೆಮಿ.

ಇತರ :

ವಿಶ್ವವಿದ್ಯಾಲಯ ನಡೆಸಿದ ಸಂಶೋಧನಾ ಕಮ್ಮಟದಲ್ಲಿ ಉಪನ್ಯಾಸ.

ಬಿ.ಸುಜ್ಞಾನಮೂರ್ತಿ (ಸಂಶೋಧನಾ ಸಹಾಯಕ)

ಕೃಷಿ ಪದಕೋಶ ಯೋಜನೆಯಲ್ಲಿ ಸಂಶೋಧನಾ ಸಹಾಯಕನಾಗಿ ಕೆಲಸ ನಿರ್ವಹಣೆ

ಕೃಷಿ ಪದಕೋಶ ಯೋಜನೆಗಳಲ್ಲಿ ಕ್ಷೇತ್ರ ಕಾರ್ಯಕರ್ತರಾಗಿ ಕೆಲಸ ನಿರ್ವಹಣೆ.

ಪ್ರಕಟಿತ ಬರೆಹಗಳು

ಗೋಪಾಲಕೃಷ್ಣ ಅಡಿಗ – ವ್ಯಕ್ತಿಚಿತ್ರ, ಕನ್ನಡ ವಾರ್ಷಿಕ ೯೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ತ್ರೀವಾದಿ ಅರಿವು (ಅನುವಾದಿತ ಲೇಖನ), ಅನಿಕೇತನ : 5-3

ಅಶೋಕ್ ಕುಮಾರ್ ರಂಜೆರೆ (ಸಂಶೋಧನಾ ಸಹಾಯಕ)

ಕೃಷಿ ಪದಕೋಶ ಯೋಜನೆಯಲ್ಲಿ ಸಂಶೋಧನಾ ಸಹಾಯಕನಾಗಿ ಕೆಲಸ ನಿರ್ವಹಣೆ

ಕೃಷಿ ಪದಕೋಶ ಯೋಜನೆಗಳಲ್ಲಿ ಕ್ಷೇತ್ರ ಕಾರ್ಯಕರ್ತರಾಗಿ ಕೆಲಸ ನಿರ್ವಹಣೆ.

ಕೃಷಿ ಪದಕೋಶ ಯೋಜನೆಯಲ್ಲಿ ಭಾಷಾ ನಿಕಾಯದ ಕಛೇರಿ ಕೆಲಸಗಳಲ್ಲಿ ನೆರವು.

ಡಿ.ಪಾಂಡುರಂಗ ಬಾಬು (ಸಂಶೋಧನಾ ಸಹಾಯಕ)

ಕೃಷಿ ಪದಕೋಶ ರಚನೆಯಲ್ಲಿ ನೆರವು. ಕ್ಷೇತ್ರಕಾರ್ಯಕರ್ತನಾಗಿ ಕೆಲಸ ನಿರ್ವಹಣೆ

ಮೈಸೂರು ವಿಶ್ವವಿದ್ಯಾಲಯದಲ್ಲಿ ಡಾ.ಸೋಮಶೇಖರಗೌಡ ಅವರ ಮಾರ್ಗದರ್ಶನದಲ್ಲಿ ಆದಿಜಾಂಬವರ ಕನ್ನಡ ಒಂದು ವಿಮರ್ಶಾತ್ಮಕ ಅಧ್ಯಯನ ಪಿ.ಹೆಚ್.ಡಿ.ಗಾಗಿ ಸಂಶೋಧನೆ ಕೈಗೊಳ್ಳಲಾಗಿದೆ.

ಸೆಲ್ವಿ ಕುಮಾರಿ (ಸಂಶೋಧನಾ ಸಹಾಯಕಿ)

ಕೃಷಿಪದ ಕೋಶ ಯೋಜನೆಯಲ್ಲಿ ನೆರವು.

## ಸಮಾಜ ವಿಜ್ಞಾನಗಳ ನಿಕಾಯ (1992-93)

ಕನ್ನಡ ವಿಶ್ವವಿದ್ಯಾಲಯದ ಲಲಿತಕಲೆಗಳ ನಿಕಾಯದಲ್ಲಿ ೧೯೯೨ರ ಆಗಸ್ಟ್ ತಿಂಗಗಳಲ್ಲಿ ಜಾನಪದ ವಿಭಾಗವು ಅಸ್ತಿತ್ವಕ್ಕೆ ಬಂದಿತು .

### ವಿಭಾಗವು ಹಮ್ಮಿಕೊಂಡ ಯೋಜನೆಗಳು

ಹಂಪಿ ಜಾನಪದ : ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಹಂಪಿ ಮತ್ತು ಸುತ್ತಮುತ್ತಲಲ್ಲಿ ಲಭ್ಯವಿರುವ ಸಮಗ್ರ ಜಾನಪದವನ್ನು ಸಂಗ್ರಹಿಸಿ. ವ್ಯವಸ್ಥಿತವಾಗಿ ಅಧ್ಯಯನ ನಡೆಸಿ. ಇತಿಹಾಸ ಮತ್ತು ಜಾನಪದದ ನಡುವಣ ಸಂಬಂಧವನ್ನು ಹೊಸ ಬಗೆಯಲ್ಲಿ ವಿವರಿಸುವ ಉದ್ದೇಶ. ಈ ಯೋಜನೆಯದು ಯೋಜನೆ ನಿರ್ದೇಶಕರು : ಡಾ ಪುರುಷೋತ್ತಮ ಬಿಳಿಮಲೆ.

ಕರ್ನಾಟಕದ ಜನಪದ ಕಲೆಗಳ ವಿಶ್ವಕೋಶ : ಆಯಾ ಪ್ರದೇಶಗಳ ಕ್ಷೇತ್ರಕಾರ್ಯಕರ್ತರ ಸಹಾಯದಿಂದ ಕರ್ನಾಟಕದಾದ್ಯಂತ ಪ್ರಚಲಿತವಿರುವ ಜನಪದ ಕಲೆಗಳ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ ವಿವರಣಾತ್ಮಕವಾದ ಸಚಿತ್ರ ಕೋಶವೊಂದನ್ನು ಸಿದ್ಧಪಡಿಸುವುದು ಪ್ರಸ್ತುತ ಯೋಜನೆಯ ಉದ್ದೇಶವಾಗಿದೆ.

ಯೋಜನಾ ನಿರ್ದೇಶಕ : ಶ್ರೀ.ಹಿ.ಚಿ.ಬೋರಲಿಂಗಯ್ಯ.

### ಕರ್ನಾಟಕದ ಜನಪದ ದೈವಕೋಶ (ಗ್ರಾಮದೇವತೆಗಳ ವಿಶ್ವಕೋಶ)

ಆಯಾ ಪ್ರದೇಶಗಳ ಕ್ಷೇತ್ರಕಾರ್ಯಕರ್ತರ ನೆರವಿನಿಂದ ಕರ್ನಾಟಕದ ವಿವಿಧೆಡೆಗಳಲ್ಲಿ ಆರಾಧನೆಗೊಳ್ಳುವ ಗ್ರಾಮದೇವತೆಗಳ (ಜನಪದ ದೈವಗಳ) ಸಮಗ್ರ ಮಾಹಿತಿಯನ್ನು ಕಲೆಹಾಕಿ, ವಿವರಣಾತ್ಮಕವಾದ ಸಚಿತ್ರ ಕೋಶವೊಂದನ್ನು ಸಿದ್ಧಪಡಿಸುವುದು ಈ ಯೋಜನೆಯ ಗುರಿಯಾಗಿದೆ.

### ಸಂಶೋಧನ ಕರ್ನಾಟಕ, ಗ್ರಂಥಾಲಯ ಹಾಗೂ ಭಾಷೆ ಮತ್ತು ಸಾಹಿತ್ಯ ವಿಭಾಗಗಳ ಸಹಭಾಗಿತ್ವದಲ್ಲಿ

ಕನ್ನಡ ಹಾಗೂ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ವಿವಿಧ ವಿಷಯಗಳ ಮೇಲೆ ದೇಶ – ವಿದೇಶಗಳ ಅನ್ಯ ವಿಶ್ವವಿದ್ಯಾಲಯಗಳಲ್ಲಿ ನಡೆದ ನಡೆಯುತ್ತಿರುವ ಸಂಶೋಧನೆಗಳ ವಿವರಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಕಿರು ಟಿಪ್ಪಣಿಸಹಿತ ದಾಖಲು ಮಾಡುವುದು ಪ್ರಸ್ತುತ ಯೋಜನೆಯ ಉದ್ದೇಶವಾಗಿದೆ.

ಯೋಜನಾ ನಿರ್ದೇಶಕರು. ಡಾ.ಪುರುಷೋತ್ತಮ ಬಿಳಿಮಲೆ, ಜೆ. ಆರ್. ರಾಮಮೂರ್ತಿ, ಡಾ. ಕೆ.ವಿ.ನಾರಾಯಣ.

ಹೊಸಪೇಟೆ ತಾಲೂರು ದರ್ಶನ :- ಗ್ರಂಥಾಲಯ ಹಾಗೂ ಇತಿಹಾಸ ವಿಭಾಗಗಳ ಸಹಭಾಗಿತ್ವದಲ್ಲಿ.

ಹೊಸಪೇಟೆ ತಾಲೂಕಿನ ಎಲ್ಲ ಗ್ರಾಮಗಳಲ್ಲೂ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು. ಸಿದ್ಧ ಪ್ರಶ್ನಾವಳಿಯ ಸಹಾಯದಿಂದ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಜಾನಪದ, ಶೈಕ್ಷಣಿಕ, ಆರ್ಥಿಕ ಹಾಗೂ ಆಡಳಿತಾತ್ಮಕ ಅಂಶಗಳನ್ನು , ಸ್ಥಿತಿ-ಗತಿಗಳಲ್ಲಿ ಅಧ್ಯಯನ ನಡೆಸುವುದು ಈ ಯೋಜನೆಯ ಗುರಿಯಾಗಿದೆ.


ಯೋಜನಾ ನಿರ್ದೇಶಕರು :-ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ.ಜೆ.ಆರ್ .ರಾಮಮೂರ್ತಿ,
ಶ್ರೀ ಲಕ್ಷ್ಮಣ್ ತೆಲಗಾವಿ.

ನಡೆಸಿದ ಕಮ್ಮಟಗಳು

ಕರ್ನಾಟಕದ ಜನಪದ ದೈವಗಳ ಅಧ್ಯಯನ ಕಮ್ಮಟ : (ಡಿಸೆಂಬರ್ ೨೪,೨೫,೨೬, ೧೯೯೨) ಗ್ರಾಮದೇವತೆಗಳ ಅಧ್ಯಯನ ವಿಧಾನಕ್ಕೆ ಸಂಬಂಧಪಟ್ಟಂತೆ ನಡೆದ ಕಮ್ಮಟವಿದು . ಕರ್ನಾಟಕದ ನಾನಾ ಕಡೆಗಳಿಂದ ಬಂದಿದ್ದ ಕ್ಷೇತ್ರಕಾರ್ಯಕರ್ತರು ಶಿಬಿರಾರ್ಥಿಗಳಾಗಿಯೂ, ಜಾನಪದ ತಜ್ಞರಾದ ಡಾ. ತೀ.ನಂ.ಶಂಕರನಾರಾಯಣ, ಡಾ. ಚೆನ್ನಣ್ಣ ವಾಲೀಕಾರ. ಡಾ. ಕೆ.ಚಿನ್ನಪ್ಪ ಗೌಡ , ಡಾ. ಬಸವರಾಜ ಸಬರದ ಮೊದಲಾದವರು ಸಂಪನ್ಮೂಲ ವ್ಯಕ್ತಿಗಳಾಗಿಯೂ ಈ ಕಮ್ಮಟದಲ್ಲಿ ಭಾಗವಹಿಸಿದರು.

ಕರ್ನಾಟಕದ ಜನಪದ ಕಲೆಗಳ ಅಧ್ಯಯನ ಕಮ್ಮಟ : (ದಶಂಬರ ೨೭,೨೮,೨೯,೧೯೯೨)

ಜನಪದ ಕಲೆಗಳ ಅಧ್ಯಯನ ವಿಧಾನಕ್ಕೆ ಸಂಬಂಧಪಟ್ಟಂತೆ ನಡೆದ ಕಮ್ಮಟವಿದು. ಕರ್ನಾಟಕದ ವಿವಿಧೆಡೆಗಳಿಂದ ಬಂದಿದ್ದ ಕ್ಷೇತ್ರಕಾರ್ಯಕರ್ತರು., ಶಿಬಿರಾರ್ಥಿಗಳಾಗಿಯೂ, ಡಾ. ಅಂಬಳಿಕೆ ಹಿರಿಯಣ್ಣ, ಡಾ. ಸೋಮಶೇಖರ ಇಮ್ರಾಪುರ. ಡಾ. ಹಿ.ಸಿ.ರಾಮಚಂದ್ರೇಗೌಡ, ಡಾ. ಕಾಳೇಗೌಡ ನಾಗವಾರ ಮುಂತಾದ ಜಾನಪದ ತಜ್ಞರು ಸಂಪನ್ಮೂಲವ್ಯಕ್ತಿಗಳಾಗಿಯೂ ಈ ಕಮ್ಮಟದಲ್ಲಿ ಭಾಗವಹಿಸಿದ್ದರು.



ಈ ವಿಭಾಗದಲ್ಲಿ ಕೆಲಸ ನಿರ್ವಹಿಸಿದ ಸಿಬ್ಬಂದಿಗಳು

ಡಾ.ಪುರುಷೋತ್ತಮ ಬಿಳಿಮಲೆ – ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು. ಎಂ.ಎ., ಪಿ.ಎಚ್ .ಡಿ.

ವಿಭಾಗದ ಮುಖ್ಯಸ್ಥರಾಗಿವುದರ ಜತೆಗೆ ಲಲಿತಕಲೆಗಳ ನಿಕಾಯದ ಡೀನ್ ಆಗಿಯೂ, ಪ್ರಭಾರ ಕುಲಸಚಿವರಾಗಿಯೂ, ಕಾರ್ಯ ಕಾರಿ ಸಮಿತಿ ಸದಸ್ಯರಾಗಿಯೂ, ``ಚೆಲುವ ಕನ್ನಡದ ''ದ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಅವಧಿಯಲ್ಲಿನ ಅವರ ಇನ್ನಿತರ ಚಟುವಟಿಕೆಗಳು ಈ ಕೆಳಗಿನಂತಿವೆ

ಪ್ರಕಟಿತ ಪುಸ್ತಕಗಳು

ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿಚಾರ ಸಾಹಿತ್ಯ ೧೯೯೨ (ಸಂಪಾದಿತ) ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಕೊರಗರು, ಕರ್ನಾಟಕ ಸಾಹಿತ್ಯ ಅಕಾಡೆಮಿ , ಬೆಂಗಳೂರು.

ಲೇಖನಗಳು

ಕೊಡವರ ಸಾವಿನ ಆಚರಣೆ – ವಿವರಣೆ ಮತ್ತು ವಿಶ್ಲೇಷಣೆ (ವಿಭಾವ; ಡಾ.ಎಂ.ಬಿ. ಕೊಟ್ರಶೆಟ್ಟಿ ಸಂಸ್ಮರಣ ಗ್ರಂಥ)
ಸಂಪಾದಕಾಯಣ (ಸಂಕ್ರಮಣ)
ಕನ್ನಡ ಸಂಸ್ಕೃತಿ ಸಂವಾದ (ಸಿರಿಗನ್ನಡ)
1992ರ ಜಾನಪದ ಪ್ರಕಟಣೆಗಳು (ಕನ್ನಡ ವಾರ್ಷಿಕ;1992)
ಕೆರೆಮನೆ ಶಿವರಾಮ ಹೆಗಡೆ (ಕನ್ನಡ ವಾರ್ಷಿಕ; 1992)

ಭಾಗವಹಿಸಿದ ವಿಚಾರಸಂಕಿರಣಗಳು – ನೀಡಿದ ಉಪನ್ಯಾಸಗಳು

`ಕನ್ನಡದ ಭವಿಷ್ಯ, ಕನ್ನಡ ಅಧ್ಯಯನ ವಿಭಾಗ, ಸ್ನಾತಕೋತ್ತರ ಅಧ್ಯಯನ ಕೇಂದ್ರ, ಸಂಡೂರು.

ಮಂಡಿಸಿದ ಪ್ರಬಂಧಗಳು

"Performance Analysis: Yakshagana (ಕಲ್ಲಿಕೋಟೆ ವಿಶ್ವವಿದ್ಯಾಲಯದ ನಾಟಕ ಶಾಲೆಯು ತ್ರಿಶ್ಶೂರಿನಲ್ಲಿ ನಡೆಸಿದ ರಾಷ್ಟ್ರಮಟ್ಟದ ವಿಚಾರಸಂಕಿರಣ) .
``ಬಂಡಾಯ ಸಾಹಿತ್ಯದ ಸೈದ್ಧಾಂತಿಕ ನೆಲೆಗಳು '' (ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದಿಂದ ನಡೆಸಿದ `ಬಂಡಾಯ ಸಾಹಿತ್ಯ' ವಿಚಾರ ಸಂಕಿರಣ) .
``ಜಾನಪದ ಅಧ್ಯಯನದ ತೊಡಕುಗಳು '' (ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ, ಕುಂದಾಪುರ) .
``ಸಾಂಸ್ಕೃತಿಕ ಅನನ್ಯತೆ (ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ) .

ಸಾಂಸ್ಕೃತಿಕ ಸದಸ್ಯತ್ವ

ತಿರುವನಂತಪುರದಲ್ಲಿರುವ `ದಕ್ಷಿಣ ಭಾರತೀಯ ಭಾಷೆಗಳ ಜಾನಪದ ಸಂಸ್ಥೆ' (ಫಾಸಿಲ್) ಯ ಕಾರ್ಯದರ್ಶಿ.

ಸಂಶೋಧನ ಮಾರ್ಗದರ್ಶನದಲ್ಲಿ ಪಿ.ಎಚ್.ಡಿ. ಪಡೆದವರು

ಶ್ರೀ.ಪಿ.ಎನ್. ಮಯ್ಯ (ಕೋಟ ಸಾಂಸ್ಕೃತಿಕ ಅಧ್ಯಯನ)

ಶ್ರೀ.ಹಿ.ಚಿ.ಬೋರಲಿಂಗಯ್ಯ ಎಂ.ಎ. - ಪ್ರವಾಚಕರು.

``ಕರ್ನಾಟಕದ ಜನಪದ ಕಲೆಗಳ ಕೋಶ'' ಯೋಜನೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುವುದರ ಜತೆಗೆ ಈ ಕೆಳಗಿನ ಇನ್ನಿತರ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಪ್ರಕಟಿತ ಲೇಖನಗಳು.

ನಗೆ ನೋವಿನ ಹಿಂದಿನ ಸತ್ಯ - ಹಬ್ಬ ಮತ್ತು ಜಾತ್ರೆಗಳು (ಪ್ರಜಾವಾಣಿ).

ಭಾಗವಹಿಸಿದ ವಿಚಾರಸಂಕಿರಣಗಳು - ನೀಡಿದ ಉಪನ್ಯಾಸಗಳು- ಮಂಡಿಸಿದ ಪ್ರಬಂಧಗಳು

`ಬಯಲಾಟದ ಸಾಂಸ್ಕೃತಿಕ ಮಹತ್ವ' (ಕನ್ನಡ ಸಾಹಿತ್ಯ ಪರಿಷತ್ತು ಕನಕಪುರದಲ್ಲಿ ಏರ್ಪಡಿಸಿದ ಅಖಿಲ ಕರ್ನಾಟಕ ನಾಟಕ ಸಾಹಿತ್ಯ ಸಮ್ಮೇಳನ).

ಶ್ರೀ ಮಂಜುನಾಥ ಬೇವಿನಕಟ್ಟೆ; ಎಂ.ಎ. ಸಂಶೋಧನ ಸಹಾಯಕ

ಪ್ರಕಟಿತ ಲೇಖನಗಳು -

``ಗ್ರಾಮದೇವತೆಗಳ ಪರಿಕಲ್ಪನೆ ಮತ್ತು ಸ್ವರೂಪ'' (ಪ್ರಜ್ಞೆ, ಮೈಸೂರು).

ಭಾಗವಹಿಸಿದ ವಿಚಾರಸಂಕಿರಣಗಳು - ಮಂಡಿಸಿದ ಪ್ರಬಂಧಗಳು ''

``ಗ್ರಾಮದೇವತೆಯ ಸ್ವರೂಪ, ಹಿನ್ನೆಲೆ ಮತ್ತು ವರ್ಗೀಕರಣ'' (ಕರ್ನಾಟಕದ ಗ್ರಾಮದೇವತೆಗಳ ಅಧ್ಯಯನ ಕಮ್ಮಟ; ಜಾನಪದ ವಿಭಾಗ, ಕನ್ನಡ ವಿಶ್ವವಿದ್ಯಾಲಯ).

ಶ್ರೀ ಚೆಲುವ ರಾಜು; ಎಂ.ಎ. - ಸಂಶೋಧನ ಸಹಾಯಕ.

ಶ್ರೀ ಮಾಧವ ಕೆ.ಕೆ.; ಎಂ.ಎ. ಸಂಶೋಧನ ಸಹಾಯಕ.

ಡಾ. ಎ. ಸುಬ್ಬಣ್ಣ ರೈ. ಎಂ.ಎ. ಪಿಎಚ್ .ಡಿ. – ಸಂಶೋಧನ ಸಹಾಯಕ

ಪ್ರಕಟಿತ ಲೇಖನಗಳು

``ವಾಮನ ನಂದಾವರರ ಜನಪದ ಸುತ್ತಮುತ್ತ'', ಕೃತಿ ಸಮೀಕ್ಷೆ, ``ಕರ್ನಾಟಕಮಲ್ಲ'' ಮುಂಬಯಿ.

ಭಾಗವಹಿಸಿದ ವಿಚಾರಸಂಕಿರಣಗಳು ಮಂಡಿಸಿದ ಪ್ರಬಂಧಗಳು

``ಐತಿಹ್ಯ ಮತ್ತು ಪುರಾಣಗಳು '' (ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸಹಯೋಗದಿಂದ ನಡೆಸಿದ `ಜಾನಪದ – ಅಧ್ಯಯನ – ನೂತನ ಆಯಾಮಗಳು ' ಎಂಬ ವಿಚಾರ ಸಂಕಿರಣ)

ಸಾಂಸ್ಕೃತಿಕ ಸದಸ್ಯತ್ವ

ಮಂಗಳೂರಿನಿಂದ ಪ್ರಕಟವಾಗುತ್ತಿರುವ ತುಳುನಾಡಿನ ಜಾನಪದಕ್ಕೆ ಮೀಸಲಾದ ``ರಾಶಿ'' ಎಂಬ ಮಾಸಪತ್ರಿಕೆಯ ಸಂಪಾದಕ ಸಮಿತಿ ಸದಸ್ಯ.

ಕುಮಾರಿ. ಎಲ್ . ಲಕ್ಷ್ಮೀದೇವಿ ; ಎಂ.ಎ. – ಸಂಶೋಧನ ಸಹಾಯಕಿ.

ಶ್ರೀ ಸೋಮಣ್ಣ ಸೂಡಿ – ಬೆರಳಚ್ಚುಗಾರರು
ಹೇಮರೆಡ್ಡಿ – ಕಾವಲುಗಾರರು.

ಸಂಶೋಧನ ವಿದ್ಯಾರ್ಥಿಗಳು – ಪಿ.ಎಚ್.ಡಿ. ಸಂಶೋಧನ ವಿದ್ಯಾರ್ಥಿ.
ವಿಶ್ವನಾಥ ಬದಿಕಾನ ಎಂ.ಎ.ಎಂ.ಫಿಲ್. (ಕನ್ನಡ)
``ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ'' ಎಂಬ ವಿಷಯದ ಕುರಿತು ಡಾ.ಪುರುಷೋತ್ತಮ ಬಿಳಿಮಲೆಯವರ ಮಾರ್ಗದರ್ಶನದಲ್ಲಿ ಪಿಎಚ್ .ಡಿ. ಅಧ್ಯಯನ ಮುಂದುವರಿಸುತ್ತಿದ್ದಾರೆ. ಪ್ರಸ್ತುತ ಅವಧಿಯ ಅವರ ಇನ್ನಿತರ ಚಟುವಟಿಕೆಗಳ ಈ ಕೆಳಗಿನಂತಿವೆ.

ಪ್ರಕಟಿತ ಲೇಖನಗಳು

``ಶ್ರೀಕೃಷ್ಣ ಆಲನ ಹಳ್ಳಿಯವರ ``ಕಾಡು'' ``ಕಥನ ಕಲೆಯ ನೆಲೆಗಳು '' ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.

ಭಾಗವಹಿಸಿದ ಕಮ್ಮಟಗಳು

``ಕರ್ನಾಟಕ ಸಾಹಿತ್ಯ ಅಕಾಡೆಮಿಯು ಮೂರು ದಿನಗಳ ರಾಯಚೂರಿನಲ್ಲಿ ನಡೆಸಿದ ಕರ್ಥನಕಲೆಯ ನೆಲೆಗಳು '' ಎಂಬ ಕಮ್ಮಟ.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ನಡೆಸಿದ ೧೦ ದಿನಗಳ ``ಸಂಶೋಧನ ಕಮ್ಮಟ''

ಭಾಗವಹಿಸಿದ ವಿಚಾರಸಂಕಿರಣಗಳು – ಮಂಡಿಸಿದ ಪ್ರಬಂಧಗಳು, ಉಪನ್ಯಾಸಗಳು

``ಕನ್ನಡ ಜಾನಪದ ಅಧ್ಯಯನ '' ಕನ್ನಡ ವಿಶ್ವವಿದ್ಯಾಲಯದ ಮಂಟಪಮಾಲೆ ಉಪನ್ಯಾಸ.

ಇತಿಹಾಸ ವಿಭಾಗ (1992-93)

ಪ್ರಸ್ತುತ ಶೈಕ್ಷಣಿಕ ವರ್ಷದ ಅಂತ್ಯದ ವೇಳೆಗೆ (1993ರ ಜನವರಿ ೨೫ರಂದು) ಸಮಾಜ ವಿಜ್ಞಾನಗಳ ನಿಕಾಯದಡಿಯಲ್ಲಿ – ಹಂಪಿಯ ವಿರೂಪಾಕ್ಷ ದೇವಾಲಯದೆದುರಿನ ಸಾಲು ಮಂಟಪದಲ್ಲಿ ಇತಿಹಾಸ ವಿಭಾಗವು ಅಸ್ತಿತ್ವಕ್ಕೆ ಬಂದಿತು . ಪ್ರಸ್ತುತ ಅವಧಿಯ ವಿಭಾಗದ ಚಟುವಟಿಕೆಗಳು ಈ ಕೆಳಗಿನಂತಿವೆ.

ಹಮ್ಮಿಕೊಂಡ ಯೋಜನೆಗಳು

ಕರ್ನಾಟಕ ಚರಿತ್ರೆ ಸಂಪುಟಗಳ ರಚನೆ: ಕರ್ನಾಟಕ ಚರಿತ್ರೆಯ ಸಮಗ್ರ ಅಧ್ಯಯನವನ್ನು ಆರು ಸಂಪುಟಗಳಲ್ಲಿ ಹೊರತರುವ ಬೃಹತ್ ಯೋಜನೆಯಿದು. ತತ್ಸಂಬಂಧವಾದ ಕೆಲಸಗಳು ಪ್ರಗತಿಯಲ್ಲಿವೆ.

ಹೊಸಪೇಟೆ ತಾಲೂಕು ದರ್ಶನ (ಜಾನಪದ ಮತ್ತು ಗ್ರಂಥಾಲಯ ವಿಭಾಗದ ಜಂಟಿ ಯೋಜನೆ)

ಜಾನಪದ ಮತ್ತು ಗ್ರಂಥಾಲಯ ವಿಭಾಗಗಳು ಈಗಾಗಲೇ ಕೈಗೊತ್ತಿಕೊಂಡಿದ್ದ ಪ್ರಸ್ತುತ ಯೋಜನೆಯಲ್ಲಿ ಇತಿಹಾಸ ವಿಭಾಗವು ತನ್ನ ಸಹಭಾಗಿತ್ವದಲ್ಲಿ ತೊಡಗಿಸಿಕೊಂಡಿತು.

ವಿಭಾಗದಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳು

ಶ್ರೀ ಲಕ್ಷ್ಮಣ್ ತೆಲಗಾವಿ, ಎಂ.ಎ. (ಇತಿಹಾಸ) ಪ್ರವಾಚಕರು

`ಹೊಸಪೇಟೆ ತಾಲೂಕು ದರ್ಶನ' ಯೋಜನೆಯ ನಿರ್ದೇಶಕರಲ್ಲೊಬ್ಬರು.

ಶ್ರೀ .ಸಿ.ಮಹದೇವ ಎಂ.ಎ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ – ಸಂಶೋಧನ ಸಹಾಯಕರು.

ವಿಶ್ವವಿದ್ಯಾಲಯದ ಗೊತ್ತುಗುರಿಗಳ ಬಗ್ಗೆ ಕುಲಪತಿಗಳು ಹಂಪಿಯಲ್ಲಿ ಹಾಗೂ ರಾಜ್ಯದ ವಿವಿಧ ಸಾಂಸ್ಕೃತಿಕ ಕೇಂದ್ರಗಳಲ್ಲಿ ವಿವಿಧ ವಿದ್ವಾಂಸರುಗಳ ಜೊತೆ ಹಲವಾರು ಸಭೆಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವು ಸಭೆಗಳ ವಿವರಗಳು.

## ಚಿತ್ರ ಕಲಾವಿದರ ಸಭೆ:

ಫೆಬ್ರವರಿ ೩, ೧೯೯೨ರಂದು ಕುಲಪತಿಗಳ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು. ಸಭೆಗೆ ಪ್ರಮುಖ ಕಲಾವಿದರಾದ ಶ್ರೀ.ಆರ್.ಎಂ. ಹಡಪದ್, ಶ್ರೀ.ಡಿ.ವಾದಿರಾಜ್.ಪ್ರೊ.ಎಂ.ಎಚ್.ಕೃಷ್ಣಯ್ಯ, ಶ್ರೀ.ಜಿ.ಬಿ.ಎಸ್.ಶೆಣೈ, ಶ್ರೀ ಪಿ.ಆರ್. ತಿಪ್ಪೇಸ್ವಾಮಿ. ಶ್ರೀ. ಎಚ್.ಎನ್. ಸುರೇಶ ಅವರು ಆಗಮಿಸಿದ್ದರು. ಸಭೆಯಲ್ಲಿ ಕರ್ನಾಟಕ ಕಲೆಗಳ ಬಗ್ಗೆ ಸಮಗ್ರ ಅಧ್ಯಯನ ಹಾಗೂ ಸಂಶೋಧನೆ ಬಗ್ಗೆ ಕೈಗೊಳ್ಳಬಹುದಾದ ಯೋಜನೆಗಳು ಕುರಿತು ಚರ್ಚಿಸಲಾಯಿತು. ವಾಸ್ತುಶಿಲ್ಪದ ಉಗಮ, ಬೆಳವಣಿಗೆ, ಸಾಂಪ್ರದಾಯಿಕ ಹಾಗೂ ಸಮಕಾಲೀನ ಶಿಲ್ಪ, ಭಿತ್ತಿಚಿತ್ರಗಳ ಇತಿಹಾಸ ಕುರಿತು ಅಧ್ಯಯನ, ಪ್ರಕಟಣೆ ಕಾರ್ಯಗಳನ್ನು ವಿಶ್ವವಿದ್ಯಾಲಯ ಕೈಗೆತ್ತಿಕೊಳ್ಳಬೇಕೆಂದು ಸಭೆ ಸೂಚಿಸಿಸಿತು. ಜಾನಪದ ದೃಶ್ಯಕಲೆಗಳ ಹಾಗೂ ಲಲಿತ ಕಲೆಗಳ ಬಗ್ಗೆಯೂ ಸಮರ್ಪಕವಾದ ಸಂಪಾದನೆ, ವ್ಯಾಖ್ಯಾನ ನಡೆಯಬೇಕೆಂದು ಸಭೆಯಲ್ಲಿ ವಿದ್ವಾಂಸರು ಅಭಿಪ್ರಾಯಪಟ್ಟರು.

## ಪಿಎಚ್.ಡಿ.ನಿಯಮಾವಳಿ ರಚನೆಯ ಸಭೆ

ಮಾಚ್ ೯ ೧೭,೧೯೯೨ರ ಪೂರ್ವಾಹ್ನ ಹಂಪಿಯಲ್ಲಿ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪಿಎಚ್.ಡಿ. ಪದವಿಗೆ ನೋಂದಾವಣಿ ಮಾಡಿ ಸಂಶೋಧನೆ ಮಾಡಲಿರುವ ಅಭ್ಯರ್ಥಿಗಳು ಅನುಸರಿಸಬೇಕಾದ ನಿಯಮಾವಳಿಗಳನ್ನು ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿರುವಂತೆ ರೂಪಿಸಲಾಯಿತು. ಸಭೆಯಲ್ಲಿ ಡಾ. ಎಂ.ಚಿದಾನಂದಮೂರ್ತಿ , ಡಾ. ಬಿ.ಎ.ವಿವೇಕರೈ. ಡಾ.ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಡಾ.ವಿಲ್ಯಂಮಾಡ್ತ , ಡಾ. ಸೋಮಶೇಖರ ಇಮ್ರಾಪುರ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ ಡಾ. ಬಡಿಗೇರ ಮೊದಲಾದವರು ಹಾಜರಿದ್ದರು.

## ವಸ್ತುಸಂಗ್ರಹಾಲಯ ಕುರಿತ ಸಭೆ

ಕುಲಪತಿಗಳ ಅಧ್ಯಕ್ಷತೆಗಳಲ್ಲಿ ಮಾಚ್ ೯ ೧೭, ೧೯೯೨ರಂದು ಮಧ್ಯಾಹ್ನ ವಸ್ತುಸಂಗ್ರಹಾಲಯ ಕುರಿತ ಸಭೆ ಹಂಪಿಯಲ್ಲಿ ನಡೆಯಿತು. ಕರ್ನಾಟಕದಲ್ಲಿ ಲಭ್ಯವಿರುವ ಜಾನಪದ ಮತ್ತು ಕನ್ನಡ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಗಳನ್ನು ಒಳಗೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತವಾಯಿತು. ಈ ವಸ್ತು ಸಂಗ್ರಹಾಲಯ ಕರ್ನಾಟಕ ಸಂಸ್ಕೃತಿ ಪರಂಪರೆಯ ಪ್ರತಿಬಿಂಬವಾಗಬೇಕೆಂದು ಅಭಿಪ್ರಾಯ ಪಡಲಾಯಿತು: ಡಾ.ಜಿ.ಶಂ.ಪರಮಶಿವಯ್ಯ , ಶ್ರೀ ಪಿ.ಆರ್. ತಿಪ್ಪೇಸ್ವಾಮಿ. ಶ್ರೀ.ಎಂ.ಎಸ್. ನಂಜುಂಡರಾವ್ , ಶ್ರೀ ಆರ್.ಎಂ. ಹಡಪದ್ , ಡಾ. ಬಸವರಾಜ ಮಲಶೆಟ್ಟಿ. ಶ್ರೀ. ವಿ.ಜಿ.ಅಂದಾನಿ ಮೊದಲಾದ ವಿದ್ವಾಂಸರು ಸಭೆಯಲ್ಲಿ ಉಪಸ್ಥಿತರಿದ್ದರು. ಪ್ರತಿಬಿಂಬವಾಗಬೇಕೆಂದು ಅಭಿಪ್ರಾಯ ಪಡಲಾಯಿತು.ಡಾ. ಜಿ.ಶಂ.ಪರಮಶಿವಯ್ಯ , ಶ್ರೀ ಪಿ.ಆರ್. ತಿಪ್ಪೇಸ್ವಾಮಿ. ಶ್ರೀ.ಎಂ.ಎಸ್. ನಂಜುಂಡರಾವ್ , ಶ್ರೀ ಆರ್.ಎಂ. ಹಡಪದ್ , ಡಾ. ಬಸವರಾಜ ಮಲಶೆಟ್ಟಿ. ಶ್ರೀ. ವಿ.ಜಿ.ಅಂದಾನಿ ಮೊದಲಾದ ವಿದ್ವಾಂಸರು ಸಭೆಯಲ್ಲಿ ಉಪಸ್ಥಿತರಿದ್ದರು.

## ಕನ್ನಡ ಭಾಷಾಶಾಸ್ತ್ರ ಕುರಿತ ಸಭೆ

ಹಂಪಿಯಲ್ಲಿ ಮಾರ್ಚ್ ೧೮, ೧೯೯೨ರಂದು ಪೂರ್ವಾಹ್ನ ಕನ್ನಡ ಭಾಷಾಶಾಸ್ತ್ರ ಕುರಿತ ಸಭೆ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ವೃತ್ತಿಪದಕೋಶ, ಕೃಷಿಪದಕೋಶ ಇತ್ಯಾದಿ ಕೋಶಗಳ ರಚನೆಯನ್ನು ವೈಜ್ಞಾನಿಕವಾಗಿ ಮಾಡಬೇಕೆಂದು ಸಭೆ ಅಭಿಪ್ರಾಯಪಟ್ಟಿತು. ಇಂಗ್ಲೀಷಿನಲ್ಲಿರುವ ಮುಖ್ಯಭಾಷಾಶಾಸ್ತ್ರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಬೇಕೆಂದು ಸಭೆ ಸೂಚಿಸಿತು.
ಈ ಸಭೆಯಲ್ಲಿ ಡಾ. ಎಂ. ಚಿದಾನಂದಮೂರ್ತಿ, ಡಾ. ಬಿ.ಎ.ವಿವೇಕರೈ ಅವರು ಭಾಗವಹಿಸಿದ್ದರು.

## ಕನ್ನಡ ಜಾನಪದ ಕುರಿತ ಸಭೆ

ಮಾರ್ಚ್ ೧೮, ೧೯೯೨ ರಂದು ಮಧ್ಯಾಹ್ನ ಹಂಪಿಯಲ್ಲಿ ಕುಲಪತಿತಯವರ ಅಧ್ಯಕ್ಷತೆಯಲ್ಲಿ ಕನ್ನಡ ಜಾನಪದದ ವಿಷಯವಾಗಿ ಸಭೆ ನಡೆಸಲಾಯಿತು. ಕರ್ನಾಟಕದ ಸಮಗ್ರ ಜಾನಪದದ ಸಂಗ್ರಹ, ಅಧ್ಯಯನ, ಸ್ಥಳನಾಮ, ಉಪಭಾಷಾಕೋಶಗಳ ರಚನೆ, ಬುಡಕಟ್ಟು ಜನಾಂಗಗಳ ಅಧ್ಯಯನ ಇತ್ಯಾದಿಗಳನ್ನು ಕುರಿತಂತೆ ಹಾಕಿಕೊಳ್ಳಬೇಕಾದ ಯೋಜನೆ ಮತ್ತು ಅವುಗಳ ಸ್ವರೂಪವನ್ನು ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಡಾ. ಎಂ.ಚಿದಾನಂದಮೂರ್ತಿ, ಸೋಮಶೇಖರ್ ಇಮ್ರಾಪುರ, ಡಾ.ಜಿ.ಶಂ. ಪರಮಶಿವಯ್ಯ, ಶ್ರೀ.ಪಿ.ಆರ್ .ತಿಪ್ಪೇಸ್ವಾಮಿ. ಡಾ. ಬಸವರಾಜ ಮಲಶೆಟ್ಟಿ. ಶ್ರೀ ಗೊರು ಚೆನ್ನಬಸಪ್ಪ . ಪ್ರೊ.ಬಿ.ಎ.ವಿವೇಕರೈ, ಎಚ್ .ಎಲ್ .ನಾಗೇಗೌಡ. ಶ್ರೀ.ಹ..ಕ. ರಾಜೇಗೌಡ ಇವರುಗಳು ಸಭೆಯಲ್ಲಿ ಭಾಗವಹಿಸಿದ್ದರು.

## ಕನ್ನಡ ಸಾಹಿತ್ಯ ಮತ್ತು ಅನುವಾದದ ಸಭೆ

ಡಾ. ಜಿ.ಎಸ್ .ಶಿವರುದ್ರಪ್ಪ. ಡಾ. ದೇ.ಜವರೇಗೌಡ, ಪ್ರೊ.ಜಿ.ಎಸ್ .ಸಿದ್ದಲಿಂಗಯ್ಯ, ಶ್ರೀ .ಬಿ.ವಿ.ಕಾರಂತ, ಶ್ರೀ. ಕೆ.ವಿ. ಕಾಳೇಗೌಡ ನಾಗವಾರ, ಶ್ರೀ ಟಿ.ಪಿ.ಅಶೋಕ ಇವರುಗಳು ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ ೨೨ ಮತ್ತು ೨೩,೧೯೯೨ ರಂದು ಹಂಪಿಯಲ್ಲಿ ಸಭೆ ಸೇರಿದ್ದರು. ಸಭೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಅನುವಾದವನ್ನು ಕುರಿತು ಮಾಡಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಿ ಹತ್ತಾರು ಯೋಜನೆಗಳನ್ನು ಕುರಿತು ಸಮಾಲೋಚನೆ ನಡೆಯಿತು.

## ವಿಜ್ಞಾನ ವಿಷಯ ಕುರಿತ ಸಭೆ

ಏಪ್ರಿಲ್ ೭, ೧೯೯೨ ರಂದು ಡಾ .ಎಚ್ . ನರಸಿಂಹಯ್ಯ, ಶ್ರೀ ಕೆ.ಎಸ್ .ನಟರಾಜ.ಪ್ರೊ.ಎಚ್ .ಆರ್ .ರಾಮಕೃಷ್ಣ, ಶ್ರೀ.ಪಿ.ಯತಿರಾಜು, ಶ್ರೀ ನಾಗಣ್ಣ , ಶ್ರೀ .ಸುಬ್ರಹ್ಮಣ್ಯಂ, ಶ್ರೀ ಎಚ್ .ಎನ್ .ವೇಣುಗೋಪಾಲ, ಶ್ರೀ ಎಚ್ .ಆರ್ .ಕೃಷ್ಣಮೂರ್ತಿ, ಪ್ರೊ.ಜೆ.ಆರ್ .ಲಕ್ಷ್ಮಣರಾವ್ ಅವರು ಕುಲಪತಿಗಳ ಅಧ್ಯಕ್ಷತೆಗಳಲ್ಲಿ ಸಭೆ ನಡೆಸಿ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಪ್ರಕಟಣೆ, ಸಂಶೋಧನೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ತೊಡಗಿಕೊಳ್ಳಬೇಕಾದ ಅಗತ್ಯವನ್ನು ಕುರಿತು ಸಲಹೆ ಸೂಚನೆಗಳನ್ನು ನೀಡಿದರು.

## ವಿಶೇಷ ಆಡಳಿತಾಧಿಕಾರಿ ಕಾರ್ಯಾಲಯ ಉದ್ಘಾಟನೆ

ನವೆಂಬರ್ ೧.೧೯೯೧ ರಂದು ಹಂಪಿ ಬಳಿಯ ಕಮಲಾಪುರದಲ್ಲಿ ಕರ್ನಾಟಕ ಸರ್ಕಾರದ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಎಂ.ವೀರಪ್ಪ ಮೊಯಿಲಿಯವರು ಆಡಳಿತಾಧಿಕಾರಿ ಕಾರ್ಯಾಲಯದ ಉದ್ಘಾಟನೆಯನ್ನು ನೆರವೇರಿಸಿದರು. ಕಮಲಾಪುರದ ಲೋಕೋಪಯೋಗಿ ಇಲಾಖೆಯ ಪ್ರವಾಸಿ ಮಂದಿರವನ್ನು ವಿಶೇಷಾಧಿಕಾರಿಗಳ ಕಾರ್ಯಾಲಯವನ್ನಾಗಿ ಪರಿವರ್ತಿಸಲಾಗಿದೆ . ಡಾ. ಚಂದ್ರಶೇಖರ ಕಂಬಾರರು ಪ್ರಾಸ್ತಾವಿಕ ಭಾಷಣ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯದ ಅರಣ್ಯ ಖಾತೆಯ ಸಹಾಯಕ ಸಚಿವರಾದ ಶ್ರೀ ಈ .ಟಿ. ಶಂಭುನಾಥ ಅವರು ವಹಿಸಿದ್ದರು. ವಿದ್ಯುತ್ ಖಾತೆಯ ಸಹಾಯಕ ಸಚಿವ ಶ್ರೀ ಎಂ.ರಾಮಪ್ಪನವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು. ಹೊಸಪೇಟೆಯ ಶಾಸಕರಾದ ಶ್ರೀ ರತನ್ ಸಿಂಗ್ , ಜಿಲ್ಲಾ ಪರಿಷತ್ ಅಧ್ಯಕ್ಷ ಶ್ರೀ ಬಾವಿಬೆಟ್ಟಪ್ಪ, ವಿಧಾನಪರಿಷತ್ ಸದಸ್ಯ ಶ್ರೀ ನಾರಾಯಣದಾಸ, ಶ್ರೀ ಮಲ್ಲಿಕಾರ್ಜುನ ಹಾಗೂ ಕಮಲಾಪುರದ ಹಲವಾರು ಪ್ರಮುಖ ಗಣ್ಯರು ಸಮಾರಂಭದಲ್ಲಿ ಹಾಜರಿದ್ದರು.

## ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಭೇಟಿ

ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಡಾ. ಚಂದ್ರಶೇಖರ ಕಂಬಾರರು ಅಧಿಕಾರ ಸ್ವೀಕರಿಸಿದ ತಕ್ಷಣ ರಾಜ್ಯದ ಒಳಗಿನ ಹೊರಗಿನ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಿಗೆ ಭೇಟಿ ನೀಡಿದರು. ಸಂಬಂಧಿಸಿದ ಅನೇಕ ಸಂಘ ಸಂಸ್ಥೆಗಳು, ಅಧ್ಯಯನ ಕೇಂದ್ರಗಳ ಹಾಗೂ ವಿವಿಧ ವಿಶ್ವವಿದ್ಯಾಲಯಗಳ ವಿದ್ವಾಂಸರ ಜೊತೆ ಚರ್ಚೆ, ಸಂವಾದ ನಡೆಸಿದರು. ಆಂಧ್ರದ ಹೈದರಾಬಾದ್‌ನಲ್ಲಿರುವ ತೆಲುಗು ವಿಶ್ವವಿದ್ಯಾಲಯ, ತಮಿಳುನಾಡಿನ ತಂಜಾವೂರಿನಲ್ಲಿರುವ ತಮಿಳು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿದ್ದರು. ತಮಿಳು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ವಿ.ಐ.ಸುಬ್ರಮಣಿಯಂ, ತೆಲುಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ. ನಾರಾಯಣರೆಡ್ಡಿ ಅವರ ಜೊತೆ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯ ಬಗ್ಗೆ ಮಾತುಕತೆ ನಡೆಸಿದ್ದರು. ಕಲ್ಕತ್ತದಲ್ಲಿರುವ ಶಾಂತಿನಿಕೇತನಕ್ಕೂ ಭೇಟಿ ಕೊಟ್ಟು ಅಲ್ಲಿ ಪ್ರೊ.ಭಟ್ಟಾಚಾರ್ಯರ ಜೊತೆಯೂ ವಿಶ್ವವಿದ್ಯಾಲಯದ ಕುರಿತು ಚಿಂತನೆ ನಡೆಸಿದರು.

## ಗಣ್ಯರ ಭೇಟಿ

ನಾಡಿನಲ್ಲಿ ಪ್ರಸಿದ್ಧರಾದ ವಿದ್ವಾಂಸರನ್ನು ಕುಲಪತಿಗಳು ಭೇಟಿಮಾಡಿ, ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿಯ ಬಗ್ಗೆ ಚರ್ಚಿಸಿದ್ದಾರೆ. ಡಾ. ಹಾ.ಮಾ.ನಾಯಕ. ಪ್ರೊ.ಎಸ್ .ಕೆ.ರಾಮಚಂದ್ರರಾವ್ , ಪ್ರೊ.ಎ.ಕೆ.ರಾಮಾನುಜನ್, ಡಾ. ಎಚ್ .ನರಸಿಂಹಯ್ಯ. ಶ್ರೀ ಗಣಪತಿ ಸ್ಥಪತಿ, ಕಲ್ಕತ್ತದ ಶ್ರೀ ಸ್ವಾಮಿ ಬ್ಯಾನರ್ಜಿ, ಪಾಂಡಿಚೇರಿ ವಿಶ್ವವಿದ್ಯಾಲಯದ ಇಂದಿರಾ ಪಾರ್ಥಸಾರಥಿ, ಡಾ.ಯು.ಆರ್.ಅನಂತಮೂರ್ತಿ, ಶ್ರೀ ಆರ್ .ಕೆ. ನೀಲಕಂಠನ್, ವೀಣೆ ದೊರೆಸ್ವಾಮಿ ಅಯ್ಯಂಗಾರ್ ಮೊದಲಾದ ಗಣ್ಯರನ್ನು ಭೇಟಿಮಾಡಿ ವಿಶ್ವವಿದ್ಯಾಲಯದ ಅಭಿವೃದ್ಧಿ ಕಾರ್ಯಗಳ ಕುರಿತು ಮಾತುಕತೆ ನಡೆಸಿದ್ದಾರೆ.

ಸಭೆಗಳು ಸಮಾರಂಭಗಳು

ಕನ್ನಡ ವಿಶ್ವವಿದ್ಯಾಲಯದ ವಿವಿಧ ಯೋಜನೆಗಳನ್ನು ರೂಪಿಸುವ ಸಲುವಾಗಿ ಮಾನ್ಯ ಕುಲಪತಿಗಳು ಕರೆದ ಪ್ರಮುಖ ಸಭೆಗಳ ವಿವರ

ಕನ್ನಡ ವಾರ್ಷಿಕ ಸಭೆ

ಕನ್ನಡ ನಾಡಿನ ಸಾಂಸ್ಕೃತಿಕ ದಾಖಲೆಗಳನ್ನು ಸಂಕಲಿಸುವ `ಕನ್ನಡ ವಾರ್ಷಿಕ ' ವನ್ನು ಪ್ರತಿವರ್ಷವೂ ಹೊರತರುವ ಉದ್ದೇಶವಿದ್ದು ಇದರ ಸಲಹಾ ಸಮಿತಿಯ ಸಭೆಯನ್ನು ಜೂನ್ ೮, ೧೯೯೨ ರಂದು ಬೆಂಗಳೂರಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. `ಕನ್ನಡ ವಾರ್ಷಿಕ 'ದ ರೂಪುರೇಷೆಗಳನ್ನು ಖಚಿತಪಡಿಸಿ `ಕನ್ನಡ ವಾರ್ಷಿಕ 1991' ರ ಸಂಪಾದಕರಾಗಿ ಡಾ.ಬಸವರಾಜ ಕಲ್ಗುಡಿಯನ್ನು ನೇಮಿಸಲಾಯಿತು. ಸದಸ್ಯರುಗಳಾದ ಕಿ.ರಂ. ನಾಗರಾಜ, ಡಾ. ಕೆ.ಮರುಳುಸಿದ್ದಪ್ಪ ಮತ್ತು ಡಾ. ಕೆ.ವಿ.ನಾರಾಯಣ ಇವರು ಸಭೆಯಲ್ಲಿ ಹಾಜರಿದ್ದರು.

ಲಾಂಛನದ ಸಭೆ

ಜೂನ್ ೯, ೧೯೯೨ ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಲಾಂಛನದ ವಿನ್ಯಾಸವನ್ನು ಆಯ್ಕೆಮಾಡುವ ಸಭೆ ನಡೆಯಿತು. ವಿಶ್ವವಿದ್ಯಾಲಯದ ಪ್ರಕಟಣೆಯ ಮೇರೆಗೆ ರಾಜ್ಯದ ೧೦೩ ಕಲಾವಿದರು ಕಳುಹಿಸಿದ ಲಾಂಛನಗಳ ವಿನ್ಯಾಸವನ್ನು, ಲಾಂಛನ ಆಯ್ಕೆ ಸಭೆಯ ಸದಸ್ಯರುಗಳಾದ ಡಾ.ಎಂ.ಚಿದಾನಂದಮೂರ್ತಿ, ಡಾ. ಜಿ.ಎಸ್. ಶಿವರುದ್ರಪ್ಪ, ಪ್ರೊ.ಅ.ಸುಂದರ, ಶ್ರೀ ಶೆಣೈ, ಶ್ರೀ ಹಡಪದ , ಶ್ರೀ ವಾಸುದೇವ, ಶ್ರೀ ಎಂ. ಎಚ್ . ಕೃಷ್ಣಯ್ಯ . ಪ್ರೊ.ಎಸ್. ಕೆ.ರಾಮಚಂದ್ರರಾವ್ ಹಾಜರಿದ್ದು ಪರಿಶೀಲಿಸಿದರು.

ಹಂಪಿ ಉತ್ಸವ ಪೂರ್ವ ಭಾವಿ ಸಭೆ

ರಾಜ್ಯ ಸರ್ಕಾರ ಆಚರಿಸುತ್ತಿದ್ದ ಹಂಪಿ ಉತ್ಸವವನ್ನು ಇನ್ನು ಮುಂದೆ ಕನ್ನಡ ವಿಶ್ವವಿದ್ಯಾಲಯ ವಹಿಸಿಕೊಳ್ಳುವ ವಿಚಾರವಾಗಿ ಜೂನ್ ೧೫, ೧೯೯೨ ರಂದು ಹಂಪಿಯಲ್ಲಿ ಸಭೆ ಸೇರಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಶಿಕ್ಷಣ ಸಚಿವರ ಗೈರು ಹಾಜರಿಯಲ್ಲಿ ಸರ್ಕಾರದ ಪರವಾಗಿ ಮಾನ್ಯ ಅರಣ್ಯ ಸಚಿವ ಶ್ರೀ.ಈ.ಟಿ.ಶಂಬುನಾಥರು ವಹಿಸಿದ್ದರು. ಸಾಹಿತ್ಯ, ನೃತ್ಯ, ಲಲಿತಕಲೆಗಳ ಅಕಾಡೆಮಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

`ಶ್ರೀ ತತ್ವನಿಧಿ ' ಸಭೆ

ಪ್ರಾಚೀನ ಕಾಲದ ಅಪೂರ್ವ ವರ್ಣಚಿತ್ರಗಳಿಂದ ಕೂಡಿದ ಈ ಗ್ರಂಥವನ್ನು ಕನ್ನಡ ವಿಶ್ವವಿದ್ಯಾಲಯ ಮೂರು ಸಂಪುಟಗಳಲ್ಲಿ ಪ್ರಕಟಿಸಲಿದ್ದು ಮೊದಲನೆಯ ಸಂಪುಟವು ನವೆಂಬರ್ ಒಂದರಂದು ಬಿಡುಗಡೆಯಾಗಲಿದೆ. ಪ್ರೊ.ಎಸ್ .ಕೆ.ರಾಮಚಂದ್ರರಾಯರು `ಶ್ರೀ ತತ್ವನಿಧಿ' ಗ್ರಂಥದ ಸಂಪಾದಕರಾಗಿರುತ್ತಾರೆ. ಈ ಕುರಿತ ಸಭೆ ಕುಲಪತಿಯವರ ಅಧ್ಯಕ್ಷತೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಬೆಂಗಳೂರು ಕಛೇರಿಯಲ್ಲಿ ನಡೆಯಿತು.

## ಸಂಶೋಧನ ಕಮ್ಮಟದ ಪೂರ್ವಭಾವಿ ಸಭೆ

ದಿನಾಂಕ 17-6-1992 ರಂದು ಕುಲಪತಿಯವರ ಕಛೇರಿಯಲ್ಲಿ ಪಿ ಎಚ್.ಡಿ. ಅಭ್ಯರ್ಥಿಗಳಿಗೆ ನಡೆಸುವ ಕಮ್ಮಟದ ಕುರಿತ ಸಭೆ ಕರೆಯಲಾಗಿತ್ತು.ಡಾ. ಎಂ.ಚಿದಾನಂದಮೂರ್ತಿ, ಡಾ.ಎಸ್ . ಶಿವಣ್ಣ, ಡಾ.ಕೆ.ವಿ. ನಾರಾಯಣ, ಡಾ. ಎಚ್ . ಎಂ. ಮರುಳಸಿದ್ದಯ್ಯ ಇವರು ಹಾಜರಿದ್ದು ಕುಲಪತಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಮ್ಮಟವನ್ನು ಆಗಸ್ಟ್ ೧೭ರಿಂದ ೨೩ರ ವರೆಗೆ ನಡೆಸುವುದೆಂದು ತೀರ್ಮಾನಿಸಲಾಯಿತು.

## ಕಾವ್ಯ ಕಮ್ಮಟ ಸಭೆ

ಕನ್ನಡ ವಿಶ್ವವಿದ್ಯಾಲಯವು ಹಂಪಿಯಲ್ಲಿ ಉದ್ದೇಶಿಸಿರುವ ಕಾವ್ಯ ಕಮ್ಮಟದ ಬಗ್ಗೆ ಚರ್ಚಿಸಲು ಕುಲಪತಿಯವರ ಅಧ್ಯಕ್ಷತೆಯಲ್ಲಿ 19-6-1992 ರಂದು ಸಭೆ ಸೇರಲಾಯಿತು. ಬೆಂಗಳೂರು ಕಛೇರಿಯಲ್ಲಿ ನಡೆದ ಸಭೆಯಲ್ಲಿ ಡಾ.ಜಿ.ಎಸ್.ಶಿವರುದ್ರಪ್ಪ, ಡಾ. ಎಚ್.ಎಸ್.ವೆಂಕಟೇಶಮೂರ್ತಿ, ಡಾ. ಕಾಳೇಗೌಡ ನಾಗವಾರ ಭಾಗವಹಿಸಿದ್ದರು. ೪೦ ವರ್ಷ ಮೀರಿದ ಹೈಸ್ಕೂಲ್ ಕನ್ನಡ ಶಿಕ್ಷಕರು ಕಮ್ಮಟದ ಅಭ್ಯರ್ಥಿಗಳಾಗಿದ್ದು, ಕರ್ನಾಟಕದ ಪ್ರತಿ ಜಿಲ್ಲೆಯಿಂದ ಇಬ್ಬರಂತೆ ಅಭ್ಯರ್ಥಿಗಳನ್ನು ಆಯ್ದುಕೊಳ್ಳುವುದು ಮತ್ತು ಕಮ್ಮಟವು 26-9-1992 ರಿಂದ 30-9-1992ರ ವರೆಗೆ ನಡೆಸುವುದು ಎಂದು ತೀರ್ಮಾನಿಸಲಾಯಿತು.

## ಬಳ್ಳಾರಿ ಜಿಲ್ಲೆಯ ಶಾಸಕರ ಸಭೆ

ದಿನಾಂಕ 22-7-1992 ರಂದು ಹಂಪಿಯಲ್ಲಿ ಬಳ್ಳಾರಿ ಜಿಲ್ಲೆಯ ಶಾಸಕರ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ, ವಿದ್ಯುತ್ ಸೌಲಭ್ಯ, ಅರಣ್ಯೀಕರಣ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕುಲಪತಿಯವರು ವಹಿಸಿದ್ದರು.

## ಕನ್ನಡ ಹಿಂದಿ ಭಾಷಾಂತರ ಸಭೆ

23-07-1992 ರಂದು ಕನ್ನಡ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಕುಲಪತಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಡಾ. ಸಿದ್ಧಲಿಂಗ ಪಟ್ಟಣ ಶೆಟ್ಟಿ, ಶ್ರೀಮತಿ ಹೇಮಾ ಪಟ್ಟಣಶೆಟ್ಟಿ, ಡಾ.ತಿಪ್ಪೇಸ್ವಾಮಿ, ಡಾ. ಪ್ರಧಾನ ಗುರುದತ್ತ, ಶ್ರೀಮತಿ ಎಚ್ . ಎಸ್ . ಪಾರ್ವತಿ, ಡಾ. ಸರಗು.ಕೃಷ್ಣಮೂರ್ತಿ, ಡಾ.ಎಂ. ಎಸ್ ಕೃಷ್ಣಮೂರ್ತಿಯವರುಗಳು ಸಭೆಯಲ್ಲಿ ಹಾಜರಿದ್ದರು. `ಕರ್ನಾಟಕ ಕನ್ನಡ ವಿಶ್ವಕೋಶ ಮತ್ತು ಕನ್ನಡ ನಿಘಂಟು' ಗಳನ್ನು ಹಿಂದಿಗೆ ಭಾಷಾಂತರಿಸಲು ನಿರ್ಧರಿಸಲಾಯಿತು. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರನ್ನು ಸಲಹಾ ಸಮಿತಿಯಲ್ಲಿ ಸಂಪಾದಕರಾಗಿ ಆಯ್ಕೆ ಮಾಡಲಾಯಿತು. ಸದಸ್ಯರುಗಳಾಗಿ ಡಾ. ತಿಪ್ಪೇಸ್ವಾಮಿ, ಡಾ. ಪ್ರಧಾನ ಗುರುದತ್ತ, ಡಾ. ಭಾಳಚಂದ್ರ ಜಯಶೆಟ್ಟಿ, ಶ್ರೀ. ಎಂ.ಎಸ್ . ಕೃಷ್ಣಮೂರ್ತಿ ಮತ್ತು, ಬಿ.ಆರ್ . ನಾರಾಯಣ ಇವರನ್ನು ನೇಮಿಸಲಾಯಿತು.

ಕನ್ನಡ-ಇಂಗ್ಲೀಷ್ ಭಾಷಾಂತರ ಸಭೆ ದಿನಾಂಕ 27-7-1992 ರಂದು ಹಂಪಿಯಲ್ಲಿ ಕುಲಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗಿನ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಪ್ರಾತಿನಿಧಿಕ ಸ್ವರೂಪದ ಕನ್ನಡ ಕವನ ಸಂಕಲನ, ಕಥಾ ಸಂಕಲನ ಮತ್ತು ನಾಟಕಗಳ ಸಂಕಲನವನ್ನು ಸಿದ್ಧಪಡಿಸಿ ಕನ್ನಡದಿಂದ ಇಂಗ್ಲೀಷಿಗೆ ಅನುವಾದಿಸಿ ಪ್ರಕಟಿಸುವುದು. ಸಭೆಯಲ್ಲಿ ಹಾಜರಿದ್ದ ಶ್ರೀ.ಎ.ಕೆ.ರಾಮಾನುಜನ್, ಬಿ.ಸಿ.ರಾಮಚಂದ್ರ ಶರ್ಮ, ಶ್ರೀ. ಕೆ.ರಾಘವೇಂದ್ರರಾವ್ , ಶ್ರೀ .ಪಿ.ಶ್ರೀನಿವಾಸರಾವ್ , ಶ್ರೀಮತಿ ಪದ್ಮಾರಾಮಚಂದ್ರಶರ್ಮ, ಶ್ರೀ ಚಂದ್ರಶೇಖರ ಪಾಟೀಲ, ಶ್ರೀ ಸುಮತೀಂದ್ರ ನಾಡಿಗ, ಶ್ರೀ. ಎಂ.ಕೆ.ಅನಿಲ್ ,ಶ್ರೀ.ಕೆ. ಹಯಗ್ರೀವಾಚಾರ್ ಇವರುಗಳನ್ನು ಒಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಯಿತು.

ಡಾ. ಕೆ.ವಿ.ನಾರಾಯಣ ಮತ್ತು ಪ್ರೊ.ಓ.ಎಲ್ . ನಾಗಭೂಷಣಸ್ವಾಮಿಯವರು ಸಂಪಾದಕ ಸಮಿತಿಗಳ ಸಂಯೋಜಕರಾಗಿರುತ್ತಾರೆಂದು ನಿರ್ಧರಿಸಲಾಯಿತು.

## ಕಿರಿಯರ ಕರ್ನಾಟಕ ಕುರಿತು ಸಭೆ

`ಕಿರಿಯರ ಕರ್ನಾಟಕ' ಕೋಶ ರಚನೆಯನ್ನು ಕುರಿತು ವಿಶ್ವವಿದ್ಯಾಲಯದಲ್ಲಿ 19-12-1992 ರಂದು ಡಾ. ಚಂದ್ರಶೇಖರ್ ಕಂಬಾರರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ೧೨ರಿಂದ ೧೫ವರ್ಷದ ವಯಸ್ಸಿನ ಮಕ್ಕಳಿಗೆ ಕರ್ನಾಟಕದ ಬಗ್ಗೆ ಖಚಿತವಾದ ತಿಳುವಳಿಕೆ ನೀಡುವ ಈ ಕೋಶದ ರೂಪು ರೇಷೆಗಳನ್ನು ಕುರಿತು ಸಭೆಯಲ್ಲಿ ಖಚಿತಪಡಿಸಲಾಯಿತು. ಎಲ್.ಎಸ್. ಶೇಷಗಿರಿರಾವ್ ಈ ಕೋಶದ ಪ್ರಧಾನ ಸಂಪಾದಕರಾಗಿರುತ್ತಾರೆ.

## ವೈದ್ಯಕೀಯ ವಿಶ್ವಕೋಶದ ಕುರಿತ ಸಭೆ

ಕನ್ನಡ ವಿಶ್ವವಿದ್ಯಾಲಯದ ಬೆಂಗಳೂರು ಕಛೇರಿಯಲ್ಲಿ 26-12-1992 ರಂದು ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರರ ಅಧ್ಯಕ್ಷತೆಯಲ್ಲಿ ವೈದ್ಯಕೀಯ ವಿಶ್ವಕೋಶ ಸಿದ್ಧತೆಯ ಪೂರ್ವ ಭಾವಿ ಸಭೆ ನಡೆಯಿತು. ಸಮಾಜದ ಅವಶ್ಯಕತೆಯನ್ನು ಗಮನಿಸಿ ಮೊದಲ ಸಂಪುಟವನ್ನು ರೋಗಗಳ ಬಗ್ಗೆ ಮಾಹಿತಿ, ತಿಳುವಳಿಕೆ ನೀಡುವುದಾಗಿ ನಿರ್ಧರಿಸಲಾಯಿತು. ಮೊದಲ ಸಂಪುಟಕ್ಕೆ ಡಾ. ಪಿ.ಎಸ್.ಶಂಕರ್ ಅವರು ಪ್ರದಾನ ಸಂಪಾದಕರು.

## ಕರ್ನಾಟಕ ಚರಿತ್ರೆಯ ಸಂಪುಟ ಸಭೆ

ದಿನಾಂಕ 28-12-1992ರಂದು ಕನ್ನಡ ವಿಶ್ವವಿದ್ಯಾಲಯದ ಬೆಂಗಳೂರು ಕಛೇರಿಯಲ್ಲಿ ಕುಲಪತಿಯವರ ಅಧ್ಯಕ್ಷತೆಯಲ್ಲಿ `ಕರ್ನಾಟಕ ಚರಿತ್ರೆಯ ಸಂಪುಟ' ಗಳ ರಚನೆಯ ಸಂಪಾದಕ ಸಮಿತಿಯ ಸಭೆ ನಡೆಯಿತು. ಈ ಯೋಜನೆಯ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಯಿತು. ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ವಿಭಾಗದ ಯೋಜನೆಯನ್ನಾಗಿ ಈ ಸಂಪುಟ ರಚನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಸಭೆ ಅಂಗೀಕರಿಸಿತು.

## ನುಡಿಹಬ್ಬ

### ಕೆಲವು ಮುಖ್ಯ ಕಾರ್ಯಕ್ರಮಗಳು

ದಿನಾಂಕ ೯ ಮತ್ತು ೧೦ ನವೆಂಬರ್, ೧೯೯೨ ರಂದು ವಿಶ್ವವಿದ್ಯಾಲಯವು ತನ್ನ ಮೊದಲ ಹುಟ್ಟುಹಬ್ಬವಾಗಿ ನುಡಿ ಹಬ್ಬವನ್ನು ಆಚರಿಸಿತು. ಡಾ. ಸಿದ್ದಯ್ಯ ಪುರಾಣಿಕ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕುಲಪತಿ ಚಂದ್ರಶೇಖರ ಕಂಬಾರರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನುಡಿಹಬ್ಬದ ಪ್ರಯುಕ್ತ ಸಮಕಾಲೀನ ಕಲೆಯ ಮೇಲಿನ ಒತ್ತಡಗಳು ಮತ್ತು ನನ್ನ ಕಲ್ಪನೆಯ ಕರ್ನಾಟಕವನ್ನು ಕುರಿತಂತೆ ಎರಡು ವಿಚಾರಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಅಲ್ಲದೆ ಕವಿಗೋಷ್ಠಿಯನ್ನು ನಡೆಸಲಾಯಿತು.

ಶ್ರೀ ಮುದೇನೂರು ಸಂಗಣ್ಣನವರು ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಕಟಣೆಗಳಾದ ಶ್ರೀ ತತ್ವನಿಧಿ, ಕನ್ನಡ ವಾರ್ಷಿಕ -1991, ಬಯಲು ಆಲಯ, ಮರೆತುಹೋದ ಸಾಮ್ರಾಜ್ಯ ಮತ್ತು ಸಂಶೋಧನಾ ಕರ್ನಾಟಕ ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ವಿಶ್ವವಿದ್ಯಾಲಯದ ಸ್ಥಾಪನೆ, ಕಾರ್ಯಾಗಾರ, ವ್ಯಕ್ತಿಗಳನ್ನು ಸನ್ಮಾನಿಸುವುದು ನುಡಿಹಬ್ಬದ ಕಾರ್ಯಕ್ರಮಗಳಲ್ಲಿ ಒಂದು. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ವರದಿಯನ್ನು ಸಿದ್ದಪಡಿಸಿ ಸರಕಾರಕ್ಕೆ ಒಪ್ಪಿಸಿದ ಶ್ರೀ ಎಸ್ .ಎಸ್ . ಒಡೆಯರ್ ದಂಪತಿಗಳನ್ನು ಈ ಸಂದರ್ಭದಲ್ಲಿ ಡಾ. ಚಂದ್ರಶೇಖರ ಕಂಬಾರ ದಂಪತಿಗಳು ವಿಶ್ವವಿದ್ಯಾಲಯದ ಪರವಾಗಿ ಸನ್ಮಾನಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ೯ ರಂದು ಸಂಜೆ ತೆಂಕುತಿಟ್ಟಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯಕ್ಷಗಾನ ಕಲಾಮಂಡಳಿಯ ಕಲಾವಿದರಿಂದ `ಗದಾಯುದ್ದ' ಯಕ್ಷಗಾನ ಹಾಗೂ ೧೦ರಂದು ಪ್ರಖ್ಯಾತ ಹಿಂದೂಸ್ತಾನಿ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರಿಂದ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನುಡಿಹಬ್ಬದ ಎರಡೂ ದಿನಗಳ ಕಾರ್ಯಕ್ರಮಗಳನ್ನು ಹಂಪಿಯ ವಿವಿಧ ಸ್ಥಳಗಳಲ್ಲಿ ಏರ್ಪಡಿಸಲಾಗಿತ್ತು.

### ನೀನಾಸಂ ನಾಟಕ ಪ್ರಯೋಗ

ನೀನಾಸಂ ತಂಡದ ನಾಟಕ ಪ್ರದರ್ಶನಗಳನ್ನು ವಿಶ್ವವಿದ್ಯಾಲಯದ ವತಿಯಿಂದ ಹೊಸಪೇಟೆ ನಗರ ಸಭಾ ಮಂದಿರದಲ್ಲಿ ಪ್ರದರ್ಶಿಸಲಾಗಿತ್ತು. ಡಿಸೆಂಬರ್ ೪ ಮತ್ತು ೫ ರಂದು ಅನುಕ್ರಮವಾಗಿ ಸಂಗ್ಯಾಬಾಳ್ಯಾ ಮತ್ತು ತಲೆದಂಡ ನಾಟಕಗಳನ್ನು ಅಭಿನಯಿಸಲಾಗಿತ್ತು.

### ಸನ್ಮಾನ ಸಮಾರಂಭಗಳು

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಿರಿಯ ವಿದ್ವಾಂಸರಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರುಗಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆಸಲ್ಲಿಸಿ ಕನ್ನಡ ನಾಡು, ನುಡಿ, ಸಂಸ್ಕೃತಿಗಳಿಗೆ ಕೊಡುಗೆ ನೀಡಿದ ಮಹನೀಯರುಗಳನ್ನು ಸನ್ಮಾನಿಸಿ ಅಭಿನಂದಿಸುವ ಪರಿಪಾಠವನ್ನು ಇಟ್ಟುಕೊಂಡಿದೆ. ಈ ಹಿನ್ನೆಲೆಯಲ್ಲಿ ನಡೆದ ಸನ್ಮಾನಗಳ ವಿವರ.

ಡಾ. ಸಿಂಪಿಲಿಂಗಣ್ಣ

ಕನ್ನಡದ ಹಿರಿಯ ಸಾಹಿತಿ, ಜಾನಪದ ತಜ್ಞ ಹಾಗೂ ಅಖಿಲ ಭಾರತ ೬೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ಸಿಂಪಿ ಲಿಂಗಣ್ಣ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿ .ಡಾ. ಚಂದ್ರಶೇಖರ ಕಂಬಾರ ಅವರು ದಿನಾಂಕ 31-12-1992ರಂದು ಶಾಲು ಹೊದಿಸಿ ಪ್ರತಿಮೆ ಅರ್ಪಿಸಿ ಸನ್ಮಾನಿಸಿದರು.

ಡಾ.ಯು.ಆರ್ .ಅನಂತಮೂರ್ತಿ

ಕೇಂದ್ರ ಸಾಹಿತ್ಯ ಅಕಾಡೆಮಿಗೆ ನೂತನ ಅಧ್ಯಕ್ಷರಾದ ಕನ್ನಡದ ಖ್ಯಾತ ಬರಹಗಾರ ಡಾ. ಯು..ಆರ್ ಅನಂತಮೂರ್ತಿ ಅವರನ್ನು ೬೦ವರ್ಷ ತುಂಬಿದ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಮಾರ್ಚ್ ೨ರಂದು ಸಂಜೆ ನಡೆದ ಸಮಾರಂಭದಲ್ಲಿ ಅನಂತಮೂರ್ತಿ ಹಾಗೂ ಶ್ರೀಮತಿ ಎಸ್ತರ್ ಅನಂತಮೂರ್ತಿ ಅವರನ್ನುಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಹಾಗೂ ಶ್ರೀಮತಿ ಸತ್ಯಭಾಮಕಂಬಾರ ಅವರುಗಳು ಶಾಲು ಹೊದಿಸಿ ಸನ್ಮಾನಿಸಿದರು.

ಕನ್ನಡ ವಿಶ್ವವಿದ್ಯಾಲಯಕ್ಕೆ ಭೇಟಿ

ತೆಲುಗು ವಿಶ್ವವಿದ್ಯಾಲಯದ ಕುಲಪತಿಯವರಾದ ಡಾ. ಪೇರ್ವಾರಂ ಜಗನ್ನಾಥ ಅವರು ದಿನಾಂಕ 18-02-1993 ರಂದು ಕನ್ನಡ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದರು. ತೆಲುಗು ವಿಶ್ವವಿದ್ಯಾಲಯದ ಅಂತರ್ ರಾಷ್ಟ್ರೀಯ ಕೇಂದ್ರದ ನಿರ್ದೇಶಕರಾದ ಡಾ. ಗೌರಿಶಂಕರ್ ಅವರು ಸಹ ಕುಲಪತಿಗಳ ಜೊತೆ ಆಗಮಿಸಿದ್ದರು.



## ಕನ್ನಡ ಸಾಹಿತ್ಯ ಕೃತಿಗಳ ಇಂಗ್ಲೀಷ್ ಅನುವಾದ ಯೋಜನೆ

ಆಧುನಿಕ ಕನ್ನಡದ ಕವಿತೆಗಳನ್ನು ಮತ್ತು ಸಣ್ಣ ಕತೆಗಳನ್ನು ನಾಡಿನ ಖ್ಯಾತ ಅನುವಾದಕರಿಂದ ಇಂಗ್ಲೀಷ್‌ಗೆ ಭಾಷಾಂತರಿಸಿ ಹಂಪಿ ಆಥೋಲಜಿ ಆಫ್ ಮಾಡರ್ನ ಕನ್ನಡ ಪೊಯಿಟ್ರಿ ಮತ್ತು. ಹಂಪಿ ಅಂಥೋಲಜಿ ಆಫ್ ಮಾಡೆರ್ನ ಕನ್ನಡ ಸ್ಟೋರೀಸ್. ಸ್ಟೋನ್ಸ್, ಕೃತಿಗಳನ್ನು ಸಿದ್ಧಪಡಿಸಲಾಗುತ್ತಿದೆ.

ಕವಿತಾ ಸಂಕಲನದ ಸಂಪಾದಕಸರು : ಬಿ.ಸಿ.ರಾಮಚಂದ್ರ ಶರ್ಮ ಮತ್ತು ಕೆ.ರಾಘವೇಂದ್ರರಾವ್ .

ಕಥಾ ಸಂಕಲನದ ಸಂಪಾದಕರು : ಪದ್ಮಾ ರಾಮಚಂದ್ರ ಶರ್ಮ, ಪಿ.ಶ್ರೀನಿವಾಸರಾವ್ ಮತ್ತು ಗಿರಡ್ಡಿ ಗೋವಿಂದರಾಜ

## ಕಮ್ಮಟಗಳು, ವಿಚಾರ ಸಂಕಿರಣಗಳು

### ಸಂಶೋಧನಾ ಕಮ್ಮಟಗಳು

17-6-92ರಂದು ಕುಲಪತಿಗಳ ಕಚೇರಿಯಲ್ಲಿ ಪಿ.ಎಚ್ .ಡಿ.ಅಭ್ಯರ್ಥಿಗಳಿಗೆ ನಡೆಸುವಕಮ್ಮಟದ ಕುರಿತು ಸಭೆಯನ್ನು ಕರೆಯಲಾಗಿತ್ತು. ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದಸ್ಯರುಗಳಾದ ಡಾ.ಎಂ.ಚಿದಾನಂದಮೂರ್ತಿ, ಡಾ.ಎಸ್.ಶಿವಣ್ಣ , ಡಾ.ಕೆ.ವಿ.ನಾರಾಯಣ, ಡಾ.ಎಚ್.ಎಂ. ಮರುಳಸಿದ್ದಯ್ಯ ಭಾಗವಹಿಸಿದ್ದರು.

ಮೊದಲ ಕಮ್ಮಟವು ಆಗಸ್ಟ್ ೧೬ ರಿಂದ ಆಗಸ್ಟ್ ೨೩ರ ವರೆಗೆ ನಡೆಯಿತು. ಎಂಟು ದಿವಸಗಳ ಈ ಕಮ್ಮಟದಲ್ಲಿ ೧೭ ಮಂದಿ ಸಂಶೋಧನಾ ಅಭ್ಯರ್ಥಿಗಳು ಭಾಗವಹಿಸಿದ್ದರು.

ಸಂಶೋಧನಾ ಅಭ್ಯರ್ಥಿಗಳು

| ಆಂತರಿಕ ಅಭ್ಯರ್ಥಿಗಳು. | ವಿಷಯ |
|---|---|
| ಬಿ.ಎಂ.ಪುಟ್ಟಯ್ಯ. | ಪ್ರತಿಸಂಸ್ಕೃತಿ ನಿರ್ಮಾಣ ಕನ್ನಡ ದಲಿತ ಸಾಹಿತ್ಯ ಅಧ್ಯಯನ. |
| ಪ್ರಕಾಶ್ ಎಸ್ .ಗರೂಡ | ಕರ್ನಾಟಕದಲ್ಲಿ ವ್ಯವಸಾಯ ರಂಗಭೂಮಿ ನಾಟಕ ಪ್ರಯೋಗ ನಿರ್ವಹಣಾ ರೀತಿ |
| ಗೌರೀಸುತ ಗಣೇಶ | ಕನ್ನಡ ದಲಿತ ಬಂಡಾಯ ಕಾವ್ಯದಲ್ಲಿ ಪ್ರತಿಮಾ ಸಂವಿಧಾನ |
| ಕೆ.ವಿಶ್ವನಾಥ ಬದಿಕಾನ | ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ |
| ಎಂ.ಮಲ್ಲಿಕಾರ್ಜುನ ಗೌಡ | ಕರ್ನಾಟಕ ಆಂಧ್ರದ ಗಡಿಭಾಗದಲ್ಲಿ ಹಿಂದೂ ಮುಸ್ಲಿಂ ಸಾಂಸ್ಕೃತಿಕ ಭಾಂಧವ್ಯವನ್ನು ಸೂಚಿಸುವ ಅಂಶಗಳು. |
| ಚಿತ್ರಾಂಗದ ಎಸ್.ಹೂಗಾರ | ಅಕ್ಕಸಾಲಿಗರ ವೃತ್ತಿಪದಗಳ ಭಾಷಾ ವೈಜ್ಞಾನಿಕ ವಿಶ್ಲೇಷಣೆ. |

ಬಾಹ್ಯ ಅಭ್ಯರ್ಥಿಗಳು

| | |
|---|---|
| ಪ್ರತಿಭಾ ನಂದಕುಮಾರ್ | ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಗಳಲ್ಲಿ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಮಕ್ಕಳ ಸಾಹಿತ್ಯ. |
| ಕೆ.ಎಚ್.ಕಟ್ಟಿ. | ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ. |
| ಶಿವಾರೆಡ್ಡಿ .ಕೆ.ಸಿ. | ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ ಒಂದು ಅಧ್ಯಯನ. |
| ಕೆ.ನಾಗಪುಷ್ಪಲತಾ | ಜನಪದ ರಂಗಕಲೆಗಳ ಸಂಗೀತ ಒಂದು ಅಧ್ಯಯನ. |
| ಚೆನ್ನಬಸವದೇವ ಓಲಿಮಠ | ಮಗ್ಗೆ ಮಾಯಿದೇವರ ಶಿವಾನುಭವ ಸೂತ್ರ |
| ಕೆ.ಬಿ.ಶಿವತಾರಕ | ತುಮಕೂರು ಜಿಲ್ಲಾ ಪ್ರದೇಶದಲ್ಲಿಯ ಪುರಾತತ್ವ ಕುರುಹುಗಳು ಒಂದು ಸಾಂಸ್ಕೃತಿಕ ಅಧ್ಯಯನ. |
| ವೀರೇಶ ಬಡಿಗೇರ | ಉತ್ತರ ಕರ್ನಾಟಕದ ಜನಪದ ಗೀತ ಮೇಳಗಳ ಸಾಂಸ್ಕೃತಿಕ ಅಧ್ಯಯನ |
| ಕೆ.ಜಿ.ನಾರಾಯಣ | ಬದಲಾಗುತ್ತಿರುವ ಯಕ್ಷಗಾನ |
| ಮಮತಾ ಗಿರಿರಾಜ್ | ಕಾವ್ಯ ಮತ್ತು ಚಿತ್ರಕಲೆಗಳಲ್ಲಿ ಸಂಜ್ಞಾಶಾಸ್ತ್ರದ ಕಾರ್ಯವಿಧಾನದ ತೌಲನಿಕ ಅಧ್ಯಯನ. |
| ಆರ್ .ವೆಂಕಟೇಶ | ಜನಪದ ನಾಟಕಗಳು ಮತ್ತು ಆಧುನಿಕ ಕನ್ನಡ ನಾಟಕಗಳ ಸಂಬಂಧ ಸ್ವರೂಪ ಅಧ್ಯಯನ. |
| ಡಿ.ಲಿಂಗರಾಜು | ಬಯಲು ಸೀಮೆಯ ಜನಪದ ಕ್ರೀಡೆಗಳು. |

ಕಮ್ಮಟದ ಉದ್ಘಾಟನೆಯನ್ನು ಷಿಕಾಗೊ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಎ.ಕೆ.ರಾಮಾನುಜನ್ ನೆರವೇರಿಸಿದರು. ಡಾ. ಎಂ.ಚಿದಾನಂದಮೂರ್ತಿ, ಡಾ. ಕೃಷ್ಣಪರಮೇಶ್ವರ ಭಟ್ಟ, ಡಾ. ಎಚ್. ಎಂ.ಮರುಳಸಿದ್ದಯ್ಯ. ಡಾ. ಕೆ.ವಿ.ನಾರಾಯಣ ಇವರು ಸಂಶೋಧನೆ ಮತ್ತು ವಿಧಾನಗಳ ಕುರಿತು ಅಭ್ಯರ್ಥಿಗಳಿಗೆ ಮಾಹಿತಿ ನೀಡಿದರು . ವಿಶೇಷ ಉಪನ್ಯಾಸಕರಾಗಿ ಡಾ. ಎನ್ .ಎಸ್ .ಶ್ರೀಧರ, ಡಾ. ಬಿ.ಎ.ವಿವೇಕ, ರೈ, ಡಾ. ಅ. ಸುಂದರ, ಡಾ.ತಾರಾನಾಥ್, ಡಾ.ಸೂರ್ಯನಾಥ ಕಾಮತ್ ಮತ್ತು ಡಾ. ಬಿ.ಷೇಕ್ ಅಲಿ ಅವರು ಭಾಗವಹಿಸಿದ್ದರು.

ಕಾವ್ಯಕಮ್ಮಟ

23-09-1992 ರಿಂದ 29-9-92ರ ವರೆಗೆ ನಡೆದ ಕಾವ್ಯ ಬೋಧನ ಕಮ್ಮಟದ ಪೂರ್ವಭಾವಿ ಸಭೆಯು 9-6-92ರಲ್ಲಿ ನಡೆದಿತ್ತು. ಕಮ್ಮಟದ ನಿರ್ದೇಶಕರಾದ ಡಾ. ಜಿ.ಎಸ್ . ಶಿವರುದ್ರಪ್ಪ, ಸಹನಿರ್ದೇಶಕರುಗಳಾದ ಡಾ.ಎಚ್.ಎಸ್.ವೆಂಕಟೇಶ ಮೂರ್ತಿ ಮತ್ತು ಡಾ. ಕಾಳೇಗೌಡ ನಾಗವಾರರು ಸಭೆಯಲ್ಲಿ ಹಾಜರಿದ್ದು ಕಮ್ಮಟದ ಕಾರ್ಯ ಯೋಜನೆಗಳನ್ನು ಕುರಿತ ತೀರ್ಮಾನಗಳನ್ನು ಕೈಗೊಂಡರು. ಪ್ರೌಢಶಾಲೆಯ ವಿದ್ಯಾರ್ಥಿಗಳು ಕನ್ನಡ ಕಾವ್ಯದ ಸಹೃದಯ ಓದುಗರು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು

ಪ್ರೌಢಶಾಲಾ ಕನ್ನಡ ಶಿಕ್ಷಕರಿಗಾಗಿ ಈ ಏಳು ದಿನಗಳ ಕಮ್ಮಟವನ್ನು ಹಮ್ಮಿಕೊಳ್ಳಲಾಗಿತ್ತು. 23-9-1992ರಂದು ಪೂರ್ವಾಹ್ನ ಚನ್ನವೀರ ಕಣವಿಯವರು ಕಮ್ಮಟವನ್ನು ಉದ್ಘಾಟಿಸಿದರು. ಕಮ್ಮಟದಲ್ಲಿ ವಿಶೇಷ ಉಪನ್ಯಾಸಕರಾಗಿ ಶ್ರೀಗಾದ ನರಹಳ್ಳಿ ಬಾಲಸುಬ್ರಮಣ್ಯ, ಎಚ್ .ಎಸ್ .ರಾಘವೇಂದ್ರರಾವ್ , ಚಂದ್ರಶೇಖರ ಪಾಟೀಲ ಮತ್ತು ರಾಮಚಂದ್ರ ಶರ್ಮ ಭಾಗವಹಿಸಿದ್ದರು. ಅಂದು ಕೀರ್ತಿನಾಥ ಕುರ್ತಕೋಟಿಯವರು ಸಮಾರೋಪ ಭಾಷಣ ಮಾಡಿದರು. ಉದ್ಘಾಟನೆ ಮತ್ತು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರರು ವಹಿಸಿದ್ದರು.

## ಸಂಶೋಧನ ಕಮ್ಮಟ

ಕನ್ನಡ ವಿಶ್ವವಿದ್ಯಾಲಯದ ಎರಡನೇ ತಂಡದ ಪಿಎಚ್ .ಡಿ. ಅಭ್ಯರ್ಥಿಗಳಿಗೆ ಸಂಶೋಧನಾ ಕಮ್ಮಟವು ೧೯೯೩ ಜನವರಿ ೨೮ರಿಂದ ಫೆಬ್ರವರಿ ೩, ೧೯೯೩ರ ವರೆಗೆ ನಡೆಯಿತು. ಈ ಕಮ್ಮಟದಲ್ಲಿ ೯ ಮಂದಿ ಸಂಶೋಧನಾ ಅಭ್ಯರ್ಥಿಗಳು ಭಾಗವಹಿಸಿದ್ದರು.

| ಸಂಶೋಧನ ಅಭ್ಯರ್ಥಿಗಳು | ವಿಷಯ |
|---|---|
| ಅಮರೇಶ ಎನ್. | ಹೈದರಾಬಾದ್ ಕರ್ನಾಟಕದ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ |
| ಅಶೋಕಕುಮಾರ ರಂಜೇರೆ | ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳ ಅಧ್ಯಯನ, ಸಂಸರ ನಾಟಕಗಳ ಮುಖೇನ. |
| ಗೋವಿಂದರಾಜು ಸಿ.ಆರ್. | ಕರ್ನಾಟಕದ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ |
| ಚಲಪತಿ ಆರ್ . | ಕನ್ನಡದಲ್ಲಿ ಜೀವನ ಚರಿತ್ರೆಯ ಬೆಳವಣಿಗೆಯನ್ನು ಕುರಿತು ಸೈದ್ಧಾಂತಿಕ ಅಧ್ಯಯನ. |
| ಮಾಧವ ಕೆ.ಕೆ. | ತಾಳಮದ್ದಲೆ ಪಠ್ಯ ಮತ್ತು ಪ್ರದರ್ಶನ |
| ವಿ.ಆರ್ .ಭಂಡಾರಿ | ಬಂಡಾಯ ಕಥಾ ಸಾಹಿತ್ಯದಲ್ಲಿ ಸಂಘರ್ಷದ ಸ್ವರೂಪ |
| ರಮಾ.ವಿ.ಬೆಣ್ಣೂರು | ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತ ವಾದ್ಯಗಳು |
| ರಮೇಶ ಸ.ಚಿ. | ದಕ್ಷಿಣ ಕರ್ನಾಟಕದ ಉಪ್ಪಾರರು ಒಂದು ಅಧ್ಯಯನ |
| ಲೋಕೇಶ.ಎ. | ಕನ್ನಡ ಕಾದಂಬರಿಗಳ ಭಾಷಿಕ ನೆಲೆಗಳು ಮತ್ತು ಗ್ರಾಮ್ಯಜೀವನದ ಅಧಿಕೃತತೆ. |

ಕಮ್ಮಟವನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯವರಾದ ಡಾ. ಚಂದ್ರಶೇಖರ ಕಂಬಾರ ಅವರು . ಉದ್ಘಾಟಿಸಿದರು.

## ಕರ್ನಾಟಕದ ಕಲೆ ಪರಂಪರೆ ಮತ್ತು ಆಧುನಿಕತೆ

೧೯೯೩ರ ಮಾರ್ಚ್ ೧ ಮತ್ತು ೨ ರಂದು ಕರ್ನಾಟಕದ ಕಲೆ, ಪರಂಪರೆ ಮತ್ತು ಆಧುನಿಕತೆಯ ಬಗ್ಗೆ ವಿಚಾರಸಂಕಿರಣವನ್ನು ನಡೆಸಲಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿಯ ನೂತನ ಅಧ್ಯಕ್ಷರಾದ ಡಾ.ಯು.ಆರ್.ಅನಂತಮೂರ್ತಿಯವರು ವಿಚಾರಸಂಕಿರಣದ ಉದ್ಘಾಟನೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ವಿಚಾರ ಸಂಕಿರಣದಲ್ಲಿ ಸಂಗೀತ ಮತ್ತು ನೃತ್ಯ . ಚಿತ್ರಕಲೆ ಮತ್ತು ಶಿಲ್ಪಕಲೆ, ಸಿನೆಮಾ, ರಂಗಭೂಮಿಗಳನ್ನು ಕುರಿತಂತೆ ನಾಲ್ಕು ವಿಚಾರಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀ ಎಸ್.ಎನ್.ಚಂದ್ರಶೇಖರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಗೀತ ಮತ್ತು ನೃತ್ಯದ ಕುರಿತ ವಿಚಾರಗೋಷ್ಠಿಯಲ್ಲಿ ಡಾ. ರತ್ನಾಶಿವಶಂಕರ್ , ಶ್ರೀಮತಿ ಲಲಿತಾ ಶ್ರೀನಿವಾಸನ್ ಅವರು ಅನುಕ್ರಮವಾಗಿ ಸಂಗೀತ ಮತ್ತು ನೃತ್ಯದ ಕುರಿತಂತೆ ಪ್ರಬಂಧ ಮಂಡಿಸಿದರು.

ಹಿರಿಯ ಚಿತ್ರಕಲಾವಿದ ಶ್ರೀ ಆರ್ .ಎಂ.ಹಡಪದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಚಿತ್ರಕಲೆಮತ್ತು ಶಿಲ್ಪಕಲೆ ಕುರಿತ ವಿಚಾರಗೋಷ್ಠಿಯಲ್ಲಿ ದಾವಣಗೆರೆಯ ಶ್ರೀ ಶಂಕರ್ ಪಾಟೀಲ್ ಹಾಗೂ ಮೈಸೂರಿನ ಶ್ರೀ ವಿಜಯರಾವ್ ಅವರು ಅನುಕ್ರಮವಾಗಿ ಚಿತ್ರಕಲೆ ಮತ್ತು ಶಿಲ್ಪಕಲೆಗಳ ಕುರಿತು ಪ್ರಬಂಧಮಂಡಿಸಿದರು.

ಮಾರ್ಚ್ ೩ ರಂದು ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಿನೆಮಾ ವಿಚಾರಗೋಷ್ಠಿಯಲ್ಲಿ ಶ್ರೀ ಸಿ. ಸೀತಾರಾಮ್ ಹಾಗೂ ಎನ್ . ವಿದ್ಯಾಶಂಕರ್ ಅನುಕ್ರಮವಾಗಿ ಜನಪ್ರಿಯ ಸಿನಿಮಾ ಮತ್ತು ಕಲಾತ್ಮಕ ಸಿನಿಮಾ ಕುರಿತು ವಿಚಾರಗಳನ್ನು ಮಂಡಿಸಿದರು.

ರಂಗಭೂಮಿಯನ್ನು ಕುರಿತ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಡಾ.ಕೆ. ಮರುಳಸಿದ್ಧಪ್ಪನವರು ವಹಿಸಿದ್ದರು. ಭಾರತೀಯ ರಂಗಭೂಮಿಯ ಬಗ್ಗೆ ಶ್ರೀ ಅಕ್ಷರ ಹಾಗೂ ಕನ್ನಡ ರಂಗಭೂಮಿಯ ಬಗ್ಗೆ ಶ್ರೀ ಎಸ್.ರಘುನಂದನ್ ಅವರು ವಿಚಾರಗಳನ್ನು ಮಂಡಿಸಿದರು.

ಪ್ರತಿ ಗೋಷ್ಠಿಯ ನಂತರ ನಡೆದ ಮುಕ್ತ ಸಂವಾದಗಳಲ್ಲಿ ಕುಂ.ವೀರಭದ್ರಪ್ಪ. ಡಿ.ಉಮಾಪತಿ. ಜಗದೀಶ ರಾಜಾ. ಡಾ. ಕೆ.ವಿ. ತಿರುಮಲೇಶ, ಗಿರಡ್ಡಿ ಗೋವಿಂದರಾಜ, ಡಾ. ವಿಜಯಾ, ಪ್ರೊ. ಎಂ. ಎಚ್ . ಕೃಷ್ಣಯ್ಯ, ಬಿ.ವಿ.ಕಾರಂತ ಮೊದಲಾದವರು ಭಾಗವಹಿಸಿದ್ದರು.

## 1992-93 ನೇ ಸಾಲಿನ ಪ್ರಕಟಣೆಗಳು

ಪುಸ್ತಕಗಳು

೧. ಶ್ರೀತತ್ತ್ವನಿಧಿ (ಸಂಪುಟ ೧) ಸಂ : ಪ್ರೊ.ಎಸ್.ಕೆ.ರಾಮಚಂದ್ರರಾವ್
೨. ಮರೆತುಹೋದ ಸಾಮ್ರಾಜ್ಯ ವಿಜಯನಗರ ಮೂಲ : ರಾಬರ್ಟ್ ಸಿವೆಲ್
ಅನು : ಸದಾನಂದ ಕನವಳ್ಳಿ
೩. ಬಯಲು ಆಲಯ ಪ್ರೊ.ಕೀರ್ತಿನಾಥ ಕುರ್ತಕೋಟಿ
೪. ಕನ್ನಡ ವಾರ್ಷಿಕ - 1991 ಸಂ : ಡಾ.ಬಸವರಾಜ ಕಲ್ಗುಡಿ
೫. ಕೆ.ವಿ.ಸುಬ್ಬಣ್ಣನವರ ಆಯ್ದ ಬರಹಗಳು ಸಂ : ಟಿ.ಪಿ.ಅಶೋಕ
6. SriTattva Nidhi (Vol.1) Ed: Prof. S.K. Ramachandra Rao
೭. ಗೊಂದಲಿಗರ ದೇವೇಂದ್ರಪ್ಪನವರ ಆಟಗಳು ಸಂ : ಮುದೇನೂರು ಸಂಗಣ್ಣ
೮. ಮಧುರಚೆನ್ನರ ಲೇಖನಗಳು ಸಂ : ಡಾ.ಗುರುಲಿಂಗ ಕಾಪಸೆ
೯. ಹೊಸತು-ಹೊಸತು ಡಾ.ಎಂ.ಚಿದಾನಂದ ಮೂರ್ತಿ
೧೦. ಬಾರಮಾಸ ಸಂ : ಶಾಂತರಸ
೧೧. ಡಾ.ಶಿವರಾಮ ಕಾರಂತ : ಈ ಶತಮಾನದ ನೋಟ ಸಂ : ಟಿ.ಪಿ.ಅಶೋಕ
೧೨. ಸಾಮಾನ್ಯ ಶಸ್ತ್ರವೈದ್ಯದ ಕಾಯಿಲೆಗಳು. ಡಾ.ಎಚ್.ಡಿ.ಚಂದ್ರಪ್ಪಗೌಡ
೧೩. ಕನ್ನಡ ತಾಯಿಗೆ ನುಡಿನಮನ ಸಂ : ಪ್ರೊ.ಎಲ್ .ಎಸ್ .ಶೇಷಗಿರಿರಾವ್
೧೪. ಕನ್ನಡ ವಾರ್ಷಿಕ ೧೯೯೨ ಸಂ : ಮಲ್ಲೇಪುರಂ ಜಿ.ವೆಂಕಟೇಶ
೧೫. ಸಿರಿಗನ್ನಡ (ಕನ್ನಡ ಅಧ್ಯಯನ) ಸಂ : ಡಾ.ಎಚ್.ಎಸ್.ರಾಘವೇಂದ್ರರಾವ್

ಮಂಟಪಮಾಲೆ

೧. ಜಾನಪದ ಕ್ಷೇತ್ರಕಾರ್ಯ : ಆಧುನಿಕ ವಿಧಾನಗಳು ಡಾ.ಪುರುಷೋತ್ತಮ ಬಿಳಿಮಲೆ
೨. ಪುರಾಣ ಪ್ರೊ.ಓ.ಎಲ್ .ನಾಗಭೂಷಣಸ್ವಾಮಿ
೩. ಸಂಶೋಧನೆಯ ಎರಡು ಹೆಜ್ಜೆಗಳು ಡಾ.ಎಚ್ .ಎಂ.ಮರುಳಸಿದ್ಧಯ್ಯ
೪. ಭಾಷಾಂತರ ಪ್ರೊ.ಓ.ಎಲ್ .ನಾಗಭೂಷಣಸ್ವಾಮಿ
೫. ಕೀಟಗಳು ಬದುಕುವ ದಾರಿ ಪಿ.ಶಿವರಾಮ ರೈ
೬. ಸ್ಫೋಟವಾದ ಮಲ್ಲೇಪುರಂ ಜಿ.ವೆಂಕಟೇಶ
೭. ಅಭಿವೃದ್ಧಿ ಮೀಮಾಂಸೆ ಟಿ.ಆರ್ .ಚಂದ್ರಶೇಖರ್
೮. ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ ಕುಂ.ವೀರಭದ್ರಪ್ಪ

ನಿಯತಕಾಲಿಕೆಗಳು

ಚೆಲುವ ಕನ್ನಡ (ದ್ವೈಮಾಸಿಕ)
ಜೂನ್ - ಜುಲೈ ೧೯೯೨ ಸಂಚಿಕೆ ೧
ಆಗಸ್ಟ್ -ಸೆಪ್ಟೆಂಬರ್ ೧೯೯೨ ಸಂಚಿಕೆ ೨

ಅಕ್ಟೋಬರ್ – ನವೆಂಬರ್ ೧೯೯೨ ಸಂಚಿಕೆ ೩
ಡಿಸೆಂಬರ್ ೯೨ – ಜನವರಿ ೯೩ ಸಂಚಿಕೆ ೪
ಫೆಬ್ರವರಿ–ಮಾರ್ಚ್ ೧೯೯೩ ಸಂಚಿಕೆ ೫

ಪುಸ್ತಕ ಬಿಡುಗಡೆ

೧. ಪುಸ್ತಕ : ಶ್ರೀ ತತ್ತ್ವನಿಧಿ
ಸಂಪಾದಕರು : ಪ್ರೊ.ಎಸ್ .ಕೆ.ರಾಮಚಂದ್ರರಾವ್
೨. ಪುಸ್ತಕ : ಕನ್ನಡ ವಾರ್ಷಿಕ – 1991
ಸಂಪಾದಕರು : ಡಾ.ಬಸವರಾಜ ಕಲ್ಗುಡಿ
೩. ಪುಸ್ತಕ : ಬಯಲು ಆಲಯ
ಲೇಖಕರು : ಪ್ರೊ.ಕೀರ್ತಿನಾಥ ಕುರ್ತಕೋಟಿ
೪. ಪುಸ್ತಕ : ಮರೆತುಹೋದ ಸಾಮ್ರಾಜ್ಯ ವಿಜಯನಗರ
ಲೇಖಕರು : ಮೂಲ: ರಾಬರ್ಟ್ ಸಿವೆಲ್ . ಅನು: ಡಾ.ಸದಾನಂದ ಕನವಳ್ಳಿ
ಈ ನಾಲ್ಕೂ ಪುಸ್ತಕಗಳನ್ನು ಬಿಡುಗಡೆ ಮಾಡಿದವರು : ಶ್ರೀ ಮುದೇನೂರು ಸಂಗಣ್ಣ
ಬಿಡುಗಡೆಯಾದ ಸ್ಥಳ : ಕನ್ನಡ ವಿಶ್ವವಿದ್ಯಾಲಯದ ಆವರಣ.ಹಂಪಿ
ಬಿಡುಗಡೆಯಾದ ದಿನಾಂಕ : **19.11.1992**
ಸಂದರ್ಭ : ನುಡಿಹಬ್ಬ
೬. ಪುಸ್ತಕ : ಶ್ರೀ ಕೆ.ವಿ.ಸುಬ್ಬಣ್ಣನವರ ಆಯ್ದ ಬರಹಗಳು
ಸಂಪಾದಕರು : ಪ್ರೊ.ಟಿ.ಪಿ.ಅಶೋಕ ಬಿಡುಗಡೆ ಮಾಡಿದವರು : ಶಾಂತರಸ
ಬಿಡುಗಡೆಯಾದ ಸ್ಥಳ : ಎ.ಎಸ್ .ಎಂ.ಕಾಲೇಜು.ಬಳ್ಳಾರಿ
ಬಿಡುಗಡೆಯಾದ ದಿನಾಂಕ : **12.1.1993**

ಪುಸ್ತಕ ಸಂಸ್ಕೃತಿ ಯಾತ್ರೆ (ಪುಸ್ತಕ ಪ್ರದರ್ಶನ ಮತ್ತು ಮಾರಾಟ)

೧. ಸ್ಥಳ : ಬೆಂಗಳೂರು
ದಿನಾಂಕ : ಫೆಬ್ರವರಿ ೧೯೯೩
ಸಂದರ್ಭ : ರಾಷ್ಟ್ರೀಯ ಪುಸ್ತಕ ಮೇಳ
೨. ಸ್ಥಳ : ಕೊಪ್ಪಳ
ದಿನಾಂಕ : ಫೆಬ್ರವರಿ ೧೯೯೩
ಸಂದರ್ಭ : 62ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

## ಗ್ರಂಥಾಲಯ

### ಸಿಬ್ಬಂದಿ ವಿವರ

ಶ್ರೀ.ಜೆ.ಆರ್. ರಾಮಮೂರ್ತಿ, ಮುಖ್ಯ ಗ್ರಂಥಪಾಲರು
ಶ್ರೀ ಎಸ್ . ಸುಹಾಸ, ಗ್ರಂಥಾಲಯ ಸಹಾಯಕ
ಶ್ರೀಮತಿ ನಾಗವೇಣಿ, ತಾಂತ್ರಿಕ ಸಹಾಯಕಿ

ಸದಸ್ಯತ್ವ
ವರದಿ ವರ್ಷದಲ್ಲಿ ಗ್ರಂಥಾಲಯವನ್ನು ಬಳಸಿದ ಸಿಬ್ಬಂದಿ ಸದಸ್ಯರ ಸಂಖ್ಯೆ ೧೨೩

ನಿಯತ ಕಾಲಿಕೆಗಳು
ವರದಿ ವರ್ಷದಲ್ಲಿ ಗ್ರಂಥಾಲಯಕ್ಕೆ ೪೪ ನಿಯತಕಾಲಿಕೆಗಳು ಬಂದಿವೆ.
ಆಂಗ್ಲ ವಿದ್ವತ್ ಪತ್ರಿಕೆಗಳು ೩೭
ಕನ್ನಡ ವಿದ್ವತ್ ಪತ್ರಿಕೆಗಳು ೧೭
ಒಟ್ಟು ನಿಯತಕಾಲಿಕೆ ೪೯

ಪುಸ್ತಕಗಳ ವಿವರ

| | |
|---|---|
| ವರದಿ ವರ್ಷದ ಕೊನೆಯಲ್ಲಿ ಗ್ರಂಥಾಲಯದಲ್ಲಿ ಸೇರ್ಪಡೆಗೊಂಡ ಪುಸ್ತಕಗಳ ಸಂಖ್ಯೆ | - 7500 |
| ಕೊಡುಗೆಯ ರೂಪದಲ್ಲಿ ಬಂದವುಗಳು | - 3000 |
| ಕೊಂಡ ಪುಸ್ತಕಗಳು | - 4500 |
| ಒಟ್ಟು | - 7500 |

ಪುಸ್ತಕಗಳ ಖರೀದಿ ಬೆಲೆ ರೂಪಾಯಿ. ೩,೧೦,೦೦೦

ಗ್ರಂಥದಾನ
ಕನ್ನಡ ವಿಶ್ವವಿದ್ಯಾಲಯದ ಗ್ರಂಥಭಂಡಾರಕ್ಕೆ ಹಿರಿಯ ಸಂಶೋಧಕರಾದ ಡಾ.ಎಂ.ಚಿದಾನಂದಮೂರ್ತಿ ಅವರು ತಮ್ಮ ವೈಯಕ್ತಿಕ ಗ್ರಂಥಗಳನ್ನು ಕೊಡುಗೆಯಾಗಿ ನೀಡಿದ್ದಾರೆ.
ಸಿರಿಗೆರೆಯ ಶ್ರೀ ತರಳಬಾಳು ಶಿವಾಚಾರ್ಯ ಮಹಾಸ್ವಾಮಿಯವರು ತಮ್ಮ ಮಠದ ಪ್ರಕಾಶನದ ಎರಡೆರಡು ಪತ್ರಿಗಳನ್ನು ಮತ್ತು ಮೈಸೂರು ವಿಶ್ವವಿದ್ಯಾಲಯಗಳು ತಮ್ಮ ಪ್ರಸಾರಾಂಗದ ಎಲ್ಲಪ್ರಕಟಣೆಗಳನ್ನು ಕೊಡುಗೆಯಾಗಿ ನೀಡಿದ್ದಾರೆ.
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಬಿ.ಎಂ.ಶ್ರೀ ಪ್ರತಿಷ್ಠಾನ. ಸಂಸ್ಥೆಗಳು ತಮ್ಮ ಎಲ್ಲ ಪ್ರಕಟಣೆಗಳನ್ನು ಉದಾರವಾಗಿ ದಾನ ನೀಡಿದ್ದಾರೆ.

ಗ್ರಂಥಾಲಯ ರೂಪಿಸಿದ ಪ್ರದರ್ಶನಗಳ ವಿವರ

ಸು.ರಂ.ಎಕ್ಕುಂಡಿ ಅವರ `ಬಕುಳದ ಹೂ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅವರ ಸಮಗ್ರಕೃತಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಕನ್ನಡ ವಿಶ್ವವಿದ್ಯಾಲಯ ಹಮ್ಮಿಕೊಂಡ `ಗ್ರಾಮದೇವತೆಗಳು' ವಿಚಾರ ಸಂಕಿರಣದ ಸಂದರ್ಭದಲ್ಲಿ ಗ್ರಾಮದೇವತೆಗಳನ್ನು ಕುರಿತ ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

## ಬಿತ್ತರ

### ಉದ್ಘಾಟನೆ

೧೯೯೩ರ ಜನವರಿ ೬ ರಂದು `ಬಿತ್ತರ' ಯೋಜನೆಯನ್ನು ಉದ್ಘಾಟಿಸಲಾಯಿತು. ಹಿರಿಯ ಪತ್ರಕರ್ತರಾದ ಶ್ರೀ.ಸಿ.ವಿ. ರಾಜಗೋಪಾಲರ ಅನುಪಸ್ಥಿತಿಯಲ್ಲಿ ಕುಲಪತಿಗಳಾದ ಡಾ .ಚಂದ್ರಶೇಖರ ಕಂಬಾರರು ಈ ಯೋಜನೆಯನ್ನು ಆರಂಭಿಸುತ್ತಾ ಮೊದಲ ಕಂತಿನ ಆರು ಲೇಖನಗಳ ಪ್ರತಿಗಳನ್ನು ೫೦ ಚಿಕ್ಕ ಪ್ರತಿಕೆಗಳಿಗೆ ಬಿಡುಗಡೆ ಮಾಡಿದರು.

### ಕಾರ್ಯವಿಧಾನ

ಕನ್ನಡ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವ ಮತ್ತು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಸಿರುವ ಪ್ರಖ್ಯಾತ ವಿದ್ವಾಂಸರುಗಳಿಂದ, ಲೇಖಕರಿಂದ ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಕಲೆ, ಜಾನಪದ,ರಾಜಕಾರಣ, ವಿಜ್ಞಾನ, ವ್ಯಕ್ತಿ ವಿಶೇಷ ಈ ಮುಂತಾದ ಹಲವು ಹತ್ತು, ವಿಷಯಗಳ ಮೇಲೆ ಒಂದು ಅಥವಾ ಎರಡು ಪುಟದ ಲೇಖನಗಳನ್ನು ಬರೆಸಲಾಗುವುದು. ಹೀಗೆ ಬರೆಸಿ, ತರಿಸಿಕೊಂಡ ಲೇಖನಗಳನ್ನು ವಿಶ್ವವಿದ್ಯಾಲಯವು ತನ್ನ ಸ್ವಂತ ವೆಚ್ಚದಿಂದ ಬೆರಳಚ್ಚು ಮಾಡಿಸಿ ಅಥವಾ ಕಂಪ್ಯೂಟರ್ ಮೂಲಕ ಸಿದ್ಧಪಡಿಸಿ, ಸಾಕಷ್ಟು ಪ್ರತಿಗಳನ್ನು ಮಾಡಿಸಿ, ಅಂಚೆ ಮೂಲಕ ನಮ್ಮ ಯೋಜನೆಗೆ ಒಪ್ಪಿಗೆ ಸೂಚಿಸುವ ನಾಡಿನ ಎಲ್ಲಾ ಸಣ್ಣ ಪತ್ರಿಕೆಗಳಿಗೆ ಕಳುಹಿಸಲಾಗುವುದು. ಲೇಖನಗಳನ್ನು ಪ್ರಕಟಿಸುವಾಗ ಕೊನೆಯಲ್ಲಿ `ಸೌಜನ್ಯ : ಬಿತ್ತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಕಮಲಾಪುರ ೫೮೩ ೨೨೧' ಎಂದು ತಪ್ಪದೇ ನಮೂದಿಸಬೇಕೆಂದು ಹಾಗೂ ಲೇಖನ ಪ್ರಕಟವಾದ ಪತ್ರಿಕೆಯ ತಲಾ ಒಂದೊಂದು ಪ್ರತಿಯನ್ನು ಕನ್ನಡ ವಿಶ್ವವಿದ್ಯಾಲಯಕ್ಕೂ ಮತ್ತು ಆಯಾಯಾ ಲೇಖಕರ ವಿಳಾಸಕ್ಕೂ ನೇರವಾಗಿ ಕಳುಹಿಸಿಕೊಡುವಂತೆ ಸಣ್ಣ ಪತ್ರಿಕೆಗಳಿಗೆ ಸೂಚಿಸಲಾಗುವುದು. ಹೀಗೆ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವ ಪತ್ರಿಕೆಗಳನ್ನು ದಾಖಲಿಸಿಕೊಳ್ಳಲಾಗುವುದು.

`ಬಿತ್ತರ' ಯೋಜನೆ, ಲೇಖನಗಳನ್ನು ಸಂಗ್ರಹಿಸುವ ಮತ್ತು ಕನ್ನಡದ ಚಿಕ್ಕ ಪತ್ರಿಕೆಗಳಿಗೆ ಒದಗಿಸಿಕೊಡುವ ಅಪರೂಪದ `ಲೇಖನ ಬ್ಯಾಂಕ್' ಆಗಿ ಕೆಲಸ ಮಾಡುತ್ತಿದೆ. ಈ ಕಾರ್ಯಕ್ಕಾಗಿ ಲೇಖಕರಿಗೆ ವಿಶ್ವವಿದ್ಯಾಲಯವು ಯಾವುದೇ ರೀತಿಯ ಸಂಭಾವನೆಯನ್ನು ಕೊಡುವುದಿಲ್ಲ ಹಾಗೂ ಪತ್ರಿಕೆಗಳಿಂದ ಪಡೆಯುವುದೂ ಇಲ್ಲ. ಕನ್ನಡದ ಸಣ್ಣ ಪತ್ರಿಕೆಗಳ ಬೆಳವಣಿಗೆಯಲ್ಲಿ ನಮ್ಮೆಲ್ಲರ ಗೌರವಯುತ ಜವಾಬ್ದಾರಿಯೂ ಇರಬೇಕೆಂದು ವಿಶ್ವವಿದ್ಯಾಲಯ ಭಾವಿಸಿದೆ. ಪಡೆಯುವ ಮತ್ತು ಕೊಡುವ ಸಂಪರ್ಕಸೇತುವೆಯಾಗಿ `ಬಿತ್ತರ' ಕಾರ್ಯ ನಿರ್ವಹಿಸುತ್ತಿದೆ.